ವಿಜಯಪುರ | ಸಂಪುಟ 01 | ಸಂಚಿಕೆ 309 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com | RNI NO: KARKAN/2023/86203 | ಭಾನುವಾರ, ಫೆಬ್ರವರಿ 04, 2024

“ಸಮುದಾಯದ ಸರ್ವಾಂಗೀಣ ಏಳಿಗೆಗಾಗಿ ಪಂಚಪೀಠಗಳು ಮತ್ತು ವಿರಕ್ತಮಠಗಳು ಸೇರಿಕೊಂಡು ಲಿಂಗಾಯತ ಎಲ್ಲ ಒಳಪಂಗಡಗಳನ್ನು ಒಗ್ಗೂಡಿಸಿ ಕೇಂದ್ರ ಮತ್ತು ರಾಜ್ಯದಲ್ಲಿ ಮೀಸಲಾತಿ ಪಡೆಯುವಂತಾಗಬೇಕು.”




– ಎಂ. ಬಿ. ಪಾಟೀಲ

ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು

## ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ | ಪತ್ರಕರ್ತರಿಗೆ ರಾಜಕೀಯ ಬೇಡ | ಸುದ್ದಿ ವಸ್ತುನಿಷ್ಠವಾಗಿರಲಿ

# ಮೌಢ್ಯ–ಕಂದಾಚಾರ–ಕರ್ಮ ಸಿದ್ಧಾಂತ ತಿರಸ್ಕರಿಸಿ

### ಪತ್ರಕರ್ತರ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಸಿಎಂ ಸಿದ್ಧರಾಮಯ್ಯ ಕರೆ

**ಉದಯರಶ್ಮಿ ನ್ಯೂಸ್**

ದಾವಣಗೆರೆ: ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡುವ ಬಗ್ಗೆ ಗಂಭೀರವಾಗಿ ಪರಿಶೀಲಿಸಿ ಬಜೆಟ್‌ನಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ನಗರದ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿರುವ ರಾಜ್ಯ ಮಟ್ಟದ 38ನೇ ಸಮ್ಮೇಳನದಲ್ಲಿ ಮಾತನಾಡಿದ ಅವರು, ನಿಮ್ಮೊಂದಿಗೆ ನಾವಿರುತ್ತೇವೆ. ನಾವು ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯದನ್ನು ಬರೆಯಿರಿ, ಕೆಟ್ಟದ್ದನ್ನು ಮಾಡಿದರೆ ಕೆಟ್ಟದ್ದು ಬರೆಯಿರಿ. ಒಳ್ಳೆಯದನ್ನು ಕೆಟ್ಟದ್ದೆಂದು ಬಿಂಬಿಸಬಾರದು ಎಂದು ಸಲಹೆ ನೀಡಿದರು.

ಮೌಢ್ಯ, ಕಂದಾಚಾರ, ಕರ್ಮ ಸಿದ್ಧಾಂತವನ್ನು ಪತ್ರಕರ್ತರು ತಿರಸ್ಕರಿಸಿ ಜನರಿಗೆ ಸತ್ಯ ಹೇಳುವ ಧೈರ್ಯ ಬೆಳೆಸಿಕೊಳ್ಳಿ. ಪತ್ರಕರ್ತರಿಗೆ ರಾಜಕೀಯ ಬೇಕಾಗಿಲ್ಲ. ವಸ್ತುನಿಷ್ಠವಾಗಿ ಇರಬೇಕು. ನಾಡಿನ ಬಡವರು ಮತ್ತು ಮಧ್ಯಮ ವರ್ಗದವರ ಆರ್ಥಿಕ ಶಕ್ತಿ ಹೆಚ್ಚಿಸುವ ಗ್ಯಾರಂಟಿ ಯೋಜನೆಗಳನ್ನು ಪತ್ರಕರ್ತರು ಬಿಟ್ಟಿ ಗ್ಯಾರಂಟಿ ಎಂದು ಕರೆಯಬಾರದು. ಪಕ್ಷಾತೀತ, ಜಾತ್ಯತೀತ, ಧರ್ಮಾತೀತವಾಗಿ ಇರುವ ಈ ಯೋಜನೆಯನ್ನು ಬಿಟ್ಟಿ ಗ್ಯಾರಂಟಿ ಎಂದು ಕರೆಯದೆ, ನೀವೇ ಪರಿಶೀಲಿಸಿ ಬರೆಯಿರಿ. ಏನನ್ನಾದರೂ ಪ್ರಕಟಿಸುವ ಮೊದಲು ಪರಿಶೀಲನೆ ನಡೆಸಿ ಎಂದು ಸಲಹೆ ನೀಡಿದರು.




ಪಟ್ಟಭದ್ರರನ್ನು ಗುರುತಿಸಿ ಮಟ್ಟ ಹಾಕುವ ನಿಷ್ಠುರತೆಯನ್ನು ಪತ್ರಕರ್ತರು ಬೆಳೆಸಿಕೊಳ್ಳಬೇಕು. ಗಂಡ–ಹೆಂಡತಿ ಜಗಳವನ್ನು ಇಡೀ ದಿನ ತೋರಿಸುವುದಕ್ಕಿಂತ, ಸಮಾಜದ ಬೆಳವಣಿಗೆಗೆ ಅಡ್ಡಿ ಆಗಿರುವ ಪಟ್ಟಭದ್ರರನ್ನು ಗುರುತಿಸಿ ಬರೆಯಿರಿ. ಇದರಿಂದ ಸಮಾಜಮುಖಿ ಪತ್ರಿಕೋದ್ಯಮ ಸಾಧ್ಯ ಎಂದರು.

ಹಣವಂತರು, ಅತೀ ಶ್ರೀಮಂತರ ಕೈಯಲ್ಲಿ ಪತ್ರಿಕೋದ್ಯಮ ಸಿಲುಕಿದೆ. ಹೀಗಾಗಿ ಶ್ರೀಮಂತರ ಹಿತಾಸಕ್ತಿ ಕಾಯುವ, ಬಡವರ ಹಿತಾಸಕ್ತಿಗೆ ವಿರುದ್ಧವಾಗಿ ಬರೆಯುವ ಅಪಾಯ ಇರುತ್ತದೆ. ಇದನ್ನು ಪರಿಶೀಲಿಸಿಕೊಳ್ಳಿ. ನಾನು ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಇರುವವನು, ಬೆಂಬಲಿಸುವವನು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಘನತೆ ತರುವಂತೆ ಮಾಡಬೇಕು ಎಂದರು.

ಸ್ವಾತಂತ್ರ್ಯ ಪೂರ್ವದ ಪತ್ರಿಕೋದ್ಯಮದಲ್ಲಿ ದೇಶಕ್ಕೆ ಸ್ವಾತಂತ್ರ್ಯ ತರಬೇಕು ಎನ್ನುವ ಆಶಯು ಪ್ರಧಾನವಾಗಿ ಕೆಲಸ ಮಾಡಿತ್ತು. ಸ್ವಾತಂತ್ರ್ಯ ನಂತರ ಪ್ರಜಾಪ್ರಭುತ್ವವನ್ನು ಕಾಯುವ, ರಕ್ಷಿಸುವ ಆಶಯು ಪ್ರಮುಖವಾಗಿದೆ ಎಂದರು.

ಪತ್ರಿಕಾ ವೃತ್ತಿ ಸಮಾಜದ ಅಸಮಾನತೆ ಹೋಗಲಾಡಿಸಲು, ಅವಕಾಶ ವಂಚಿತರ ಪರವಾಗಿ, ಮೀಸಲಾತಿಯ ಆಶಯಗಳ ಪರವಾಗಿ ಇರಬೇಕು. ಇದರಿಂದ ಸಾಮಾಜಿಕ ನ್ಯಾಯಯನ್ನು ಧ್ವನಿ ಇಲ್ಲದವರಿಗೆ ಕೊಡಲು ಸಾಧ್ಯ. ಹೀಗಾದಾಗ ಬಸವಣ್ಣನವರ ಸಮ ಸಮಾಜದ ಆಶಯು ಈಡೇರಲು ಸಾಧ್ಯ. ಪತ್ರಕರ್ತರು ಇದಕ್ಕೆ ಪೂರಕವಾಗಿ ವಸ್ತುನಿಷ್ಠವಾಗಿ ಕೆಲಸ ಮಾಡಬೇಕು ಎಂದರು.

ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರ ಸಹಯೋಗದಲ್ಲಿ ನಡೆದ ಸಮ್ಮೇಳನದ ಅಧ್ಯಕ್ಷತೆಯನ್ನು ಅಧ್ಯಕ್ಷ ಶಿವಾನಂದ ತಗಡೂರು ವಹಿಸಿದ್ದರು.

ಮಾಜಿ ಸಚಿವರಾದ ಶಾಮನೂರು ಶಿವಶಂಕರಪ್ಪ, ತೋಟಗಾರಿಕಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕರಾದ ಬಸವಂತಪ್ಪ, ಡಿ.ಜಿ.ಶಾಂತನಗೌಡ, ಇನ್ ಸೈಟ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಜಿ.ಬಿ.ವಿನಯ್‌ಕುಮಾರ್ ಸೇರಿ ಸಂಘದ ಪದಾಧಿಕಾರಿಗಳು ಇದ್ದರು.




ಜನಸಾಮಾನ್ಯರು ಪತ್ರಿಕಾ ವೃತ್ತಿ ಮೇಲೆ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಆ ನಿರೀಕ್ಷೆಗಳು ಹುಸಿಯಾಗದಂತೆ ಪತ್ರಕರ್ತರು ವೃತ್ತಿಪರತೆ ಬೆಳೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಕರ್ತರಿಗೆ ಸಲಹೆ ನೀಡಿದರು.

ಈಗ ತಂತ್ರಜ್ಞಾನ, ವಿಜ್ಞಾನ ಬಹಳ ಬೆಳೆದಿದ್ದು ಇದರ ಪ್ರಯೋಜನವನ್ನು ಪತ್ರಿಕಾವೃತ್ತಿ ಬಳಸಿಕೊಳ್ಳಬೇಕಿದೆ. ಆದರೆ ಸತ್ಯನಿಷ್ಠೆಯನ್ನು ಯಾವುದೇ ಕಾರಣಕ್ಕೂ ಪತ್ರಕರ್ತರು ಬಿಡಬಾರದು ಎಂದು ಮುಖ್ಯಮಂತ್ರಿಗಳು ನುಡಿದರು.

## ಲಿಂ.ಶಿವಕುಮಾರ ಸ್ವಾಮೀಜಿಗೂ 'ಭಾರತ ರತ್ನ' ಗೌರವ ಸಿಗಲಿ

# ಡಿಸಿಎಂ ಡಿ.ಕೆ. ಶಿವಕುಮಾರ ಆಗ್ರಹ

**ಉದಯರಶ್ಮಿ ನ್ಯೂಸ್**

ವಿಜಯಪುರ: “ಹಿರಿಯ ನಾಯಕ ಲಾಲಕೃಷ್ಣ ಆಡ್ವಾಣಿ ಅವರಿಗೆ ಭಾರತ ರತ್ನ ನೀಡಿರುವುದನ್ನು ಸ್ವಾಗತಿಸುತ್ತೇವೆ. ಅದಕ್ಕೆ ನಮ್ಮ ಯಾವುದೇ ತಕರಾರಿಲ್ಲ. ಆದರೆ ತುಮಕೂರಿನ ಸಿದ್ದಗಂಗಾ ಮಠದ ಶ್ರೀಗಳಾದ ಲಿಂಗೈಕ್ಯ ಶಿವಕುಮಾರ ಸ್ವಾಮಿಜಿಗಳಿಗೂ ಭಾರತ ರತ್ನ ಗೌರವ ನೀಡಬೇಕು ಎಂಬುದು ನಮ್ಮ ಆಗ್ರಹ” ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.



ಶನಿವಾರ ಬಸವನ ಬಾಗೇವಾಡಿಯಲ್ಲಿ ಬಸವಣ್ಣ ದೇಗುಲದಲ್ಲಿ ಪೂಜೆ ಸಲ್ಲಿಸಿದ ನಂತರ ಮಾಧ್ಯಮಗಳು ಆಡ್ವಾಣಿ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಿರುವ ಬಗ್ಗೆ ಕೇಳಿದಾಗ ಶಿವಕುಮಾರ್ ಅವರು ಪ್ರತಿಕ್ರಿಯಿಸಿದ್ದು ಹೀಗೆ;

“ನಮ್ಮ ರಾಜ್ಯದಲ್ಲಿ ಅನ್ನದಾಸೋಹಕ್ಕೆ ಹೆಸರಾಗಿದ್ದವರು ಶಿವಕುಮಾರ ಸ್ವಾಮೀಜಿಗಳು. ಅವರಿಗೆ ಈ ಗೌರವ ಸಲ್ಲಬೇಕು ಎಂಬುದು ನಮ್ಮ ಒತ್ತಾಯ. ಈ ಬಗ್ಗೆ ನಮ್ಮ ಸರ್ಕಾರ ಕೇಂದ್ರಕ್ಕೆ ಪತ್ರ ಬರೆದು ಮನವಿ ಮಾಡಿತ್ತು. ಈ ವಿಚಾರದಲ್ಲಿ ತೀರ್ಮಾನ ಅವರಿಗೆ ಬಿಟ್ಟಿದೆ” ಎಂದು ಪ್ರತಿಕ್ರಿಯಿಸಿದರು.

## ಅಡ್ವಾಣಿಗೆ ಭಾರತ ರತ್ನ ಘೋಷಣೆ :ಕಾರಜೋಳ ಸಂತಸ

**ಉದಯರಶ್ಮಿ ನ್ಯೂಸ್**

ವಿಜಯಪುರ: ರಾಮ ಮಂದಿರ ನಿರ್ಮಾಣ ಕಾರ್ಯದ ಹೋರಾಟದ ಕರ್ಣಧಾರತ್ವ ವಹಿಸಿದ ಹಾಗೂ ಜನಸೇವೆಯನ್ನೇ ತಮ್ಮ ಜೀವನ ಎಂದು ಭಾವಿಸಿದ ಮಾಜಿ ಉಪ ಪ್ರಧಾನಿ ಲಾಲ್ ಕೃಷ್ಣ ಅಡ್ವಾಣಿ ಅವರಿಗೆ ಭಾರತ ರತ್ನ ಘೋಷಣೆಯಾಗಿರುವುದು ಸಂತಸವನ್ನು ಇಮ್ಮಡಿಗೊಳಿಸಿದೆ ಎಂದು ವಿಜಯಪುರ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಉಮೇಶ ಕಾರಜೋಳ ಹೇಳಿದ್ದಾರೆ.

ರಾಜಕೀಯ ರಂಗದಲ್ಲಿ ಭೀಷ್ಮ ಪಿತಾಮಹನಂತೆ ಗೋಚರಿಸುವ ಅಪರೂಪದ ವ್ಯಕ್ತಿತ್ವ ಎಲ್.ಕೆ. ಅಡ್ವಾಣಿ ಅವರದ್ದು. ಜನರ ಧ್ವನಿಯಾಗಿ ಸಂಸತ್ ನಲ್ಲಿ ಗುಡುಗುತ್ತಿದ್ದ ಅವರು ಸಿದ್ಧಾಂತಗಳೊಂದಿಗೆ ರಾಜಿ ಮಾಡಿಕೊಂಡವರಲ್ಲ. ದಿ.ಅಟಲ್ ಬಿಹಾರಿ ವಾಜಪೇಯಿ ಹಾಗೂ ಅಡ್ವಾಣಿ ಜಿ ಅವರ ಜೋಡಿ ದೇಶದಲ್ಲಿ ಅನುಪಮ ಪ್ರಗತಿಯ ಕ್ರಾಂತಿಯನ್ನೇ ಉಂಟು ಮಾಡಿತು.

ಹಿಂದುತ್ವದ ಮೇಲೆ ಅಚಲ ಶ್ರದ್ಧೆ, ಜನರ ಮೇಲೆ ಅಪಾರ ಕಳಕಳಿ, ಎಷ್ಟೇ ಕಷ್ಟ ಬಂದರೂ ಛಲದಿಂದ ಹೋರಾಡುವ ಜನನಾಯಕರಾಗಿರುವ ಎಲ್.ಕೆ. ಅಡ್ವಾಣಿ ಒಬ್ಬ ಆದರ್ಶಮಯಿ, ಕರುಣಾಮಯಿ. ರಾಷ್ಟ್ರಕ್ಕೆ ಕೊಡುಗೆ ನೀಡಿದ ಅಡ್ವಾಣಿಜಿ ಅವರು ಒಬ್ಬ ಶ್ರೇಷ್ಠ ರತ್ನ, ಈಗ ಅವರು ಭಾರತ ರತ್ನಕ್ಕೆ ಭಾಜನರಾಗಿರುವುದು ಸಕಲರೂ ಸಂತಸ ಪಡುವ ಸಂಗತಿಯಾಗಿದೆ ಎಂದು ಕಾರಜೋಳ



## ವಿವಿಧ ಬೇಡಿಕೆಗೆ ಆಗ್ರಹಿಸಿ ಡಿಸಿಎಂಗೆ ರೈತರ ಆಗ್ರಹ

**ಉದಯರಶ್ಮಿ ನ್ಯೂಸ್**

ಆಲಮಟ್ಟಿ: ವಿವಿಧ ಬೇಡಿಕೆಗೆ ಆಗ್ರಹಿಸಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ರೈತರು ಶನಿವಾರ ಮನವಿ ಅರ್ಪಿಸಿದರು.

ಅಧಿಕಾರಿಗಳ ಸಭೆಯ ನಂತರ ರೈತರಿದ್ದ ಸ್ಥಳಕ್ಕೆ ಆಗಮಿಸಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ರೈತರ ಮನವಿ ಸ್ವೀಕರಿಸಿದರು.

ರಾಜ್ಯ ಬಜೆಟ್ ನಲ್ಲಿ ಕೆಬಿಜೆಎನ್ ಎಲ್ ಗೆ ಹೆಚ್ಚಿನ ಅನುದಾನ ಒದಗಿಸಬೇಕು, ಯುಕೆಪಿ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು, ಪ್ರವಾಸಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಿ ಆಲಮಟ್ಟಿಯನ್ನು ಪ್ರವಾಸಿ ತಾಣಕ್ಕೆ ಹೆಚ್ಚಿನ ಅನುದಾನ ನೀಡಬೇಕು, ಈ ಭಾಗದಲ್ಲಿ ಕೃಷ್ಣಾ ನದಿಯಿದೆ, ನೀರು ಸಾಕಷ್ಟಿದೆ, ಕೂಡಗಿ ಉಷ್ಣ ವಿದ್ಯುತ್ ಸ್ಥಾವರವೂ ಇದೆ, ವಿದ್ಯುತ್ ಸೌಕರ್ಯವಿದೆ, ಹೀಗಾಗಿ ಇಲ್ಲಿ ವಿವಿಧ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ಮುಂದಾಗಬೇಕು, ಆಲಮಟ್ಟಿ ಯೋಜನೆಯ ಸಂತ್ರಸ್ತರ ಮಕ್ಕಳಿಗೆ ಉದ್ಯೋಗ ಹಾಗೂ ಕೌಶಲ್ಯಾಭಿವೃದ್ಧಿ ತರಬೇತಿ ಒದಗಿಸಬೇಕು ಎಂದರು. ಅಧಿಕಾರಿಗಳು ರೈತರ ಯಾವುದೇ ಮಾತಿಗೂ ಸರಿಯಾಗಿ ಸ್ಪಂದಿಸುವುದಿಲ್ಲ ಏರು ಧ್ವನಿಯಲ್ಲಿ ಮಾತನಾಡುತ್ತಾರೆ ಎಂದು ರೈತರು ಆರೋಪಿಸಿದರು.

ಈ ಭಾಗದ ನೀರಾವರಿ ಸಮಸ್ಯೆಗಳ ಬಗ್ಗೆ ಇದೇ ತಿಂಗಳು 12 ಇಲ್ಲವೇ 13 ರಂದು ಈ ಭಾಗದ ಶಾಸಕರ ಜತೆ ಸಭೆ ನಡೆಸುವೆ ಎಂದು ಡಿ.ಕೆ.ಶಿವಕುಮಾರ ಭರವಸೆ ನೀಡಿದರು.



ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಘಟಕದ ಉಪಾಧ್ಯಕ್ಷ ಬಸವರಾಜ ಬಾಗೇವಾಡಿ, ತಾಲ್ಲೂಕು ರೈತ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ತಿರುಪತಿ ಬಂಡಿವಡ್ಡರ, ಆರ್.ಎಸ್. ಉಕ್ಕಲಿ, ಶರಣಗೌಡ ಪಾಟೀಲ, ಬಸವರಾಜ ದಂಡಿನ, ಬಿ.ಎಸ್. ಪಾಟೀಲ, ಬಸವರಾಜ ಸಾತಿಹಾಳ ಮತ್ತೀತರರು ಇದ್ದರು.

ಮನವಿ ಸ್ವೀಕರಿಸಲು ತಡವಾಗಿದಕ್ಕೆ ಆಕ್ರೋಶಗೊಂಡ ರೈತರು ಧಿಕ್ಕಾರ ಹಾಗೂ ಘೋಷಣೆ ಕೂಗಿದರು.

**ಡಿಕೆಶಿಗೆ ಮನವಿ ಅರ್ಪಿಸಿದ ಗುತ್ತಿಗೆದಾರರು:**

ಕೆಬಿಜೆಎನ್ ಎಲ್ ಹಾಗೂ ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಇಲಾಖೆಯಲ್ಲಿ ಕರೆದ ಟೆಂಡರ್ ಗಳ ಕಾಮಗಾರಿ ಪೂರ್ಣಗೊಂಡು ಹಲವು ತಿಂಗಳುಗಳು ಕಳೆದಿವೆ. ಆದರೆ ಅನುದಾನವಿಲ್ಲದೇ ಬಿಲ್ ಪಾವತಿಯಾಗುತ್ತಿಲ್ಲ, ಇದರಿಂದ ಗುತ್ತಿಗೆದಾರರಿಗೆ ತೀವ್ರ ಆರ್ಥಿಕ ಸಂಕಷ್ಟ ಉಂಟಾಗಿದೆ ಎಂದು ಗುತ್ತಿಗೆದಾರರು ದೂರಿದರು.

ಕಳೆದ ಎರಡು ವರ್ಷದಿಂದ ಕೆಬಿಜೆಎನ್ ಎಲ್ ಕ್ಕೆ ಸಮರ್ಪಕ ಅನುದಾನವಿಲ್ಲದೆ ಯಾವುದೇ ಹೊಸ ಕಾಮಗಾರಿಗಳ ಟೆಂಡರ್ ಕರೆದಿಲ್ಲ, ಹೀಗಾಗಿ ಗುತ್ತಿಗೆದಾರರಿಗೆ ಕೆಲಸವಿಲ್ಲದೆ ಅಲೆಯುವಂತಾಗಿದೆ. ನಿಗಮಕ್ಕೆ ಆರ್ಥಿಕ ಅನುದಾನ ನೀಡಬೇಕು ಎಂದರು.


2022–23 ನೇ ಸಾಲಿನಲ್ಲಿ ಕರೆಯಲಾದ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಅರ್ಧಕ್ಕೆ ನಿಂತಿದ್ದು, ಅವುಗಳನ್ನು ಪೂರ್ಣಗೊಳಿಸಿ ಕಾಮಗಾರಿ ನಿರ್ವಹಿಸಲು ಅನುಮತಿ ನೀಡಬೇಕು ಎಂದು ಅವರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಮಲಕಾಜಪ್ಪ ಮೇಟಿ, ಶಿವು ಗದಿಗೆಪ್ಪಗೋಳ, ಬಸವರಾಜ ದಂಡಿನ, ವೈ.ವೈ. ಬಿರಾದಾರ, ಅಂದಾನಯ್ಯ ಮುಷ್ಠಿಗೇರಿ, ಟಿ.ಎಸ್. ಅಫಜಲಪುರ, ವಿನೋದ ಉಳ್ಳಾಗಡ್ಡಿ, ಯಾಕೂಬ್ ಮುದ್ನಾಳ, ಹನುಮಂತ ಪೂಜಾರಿ, ಮಹಾಂತೇಶ ಡೆಂಗಿ, ವೆಂಕಟೇಶ ನಾಯಕ, ಮುಕ್ತಮ್ ಮಕಾನದಾರ್, ಎಲ್.ಎಚ್. ಗಡ್ಡಿ ಯೂಸುಫ್ ಆಲಮಟ್ಟಿ ಮತ್ತೀತರರು ಇದ್ದರು.

## ರಾಜ ನುಡಿ

‘ಪ್ರತೀಕ್ಷೆಯು’ ಬದಲು ‘ಪರಿವರ್ತನೆ’ಯನ್ನು ಪರ್ಯಾಯವಾಗಿಸಿಕೊಂಡಾಗ ಪ್ರಬುದ್ಧತೆ ಪ್ರಾರಂಭವಾಗುತ್ತದೆ.

–ಡಾ. ರಾಜಶೇಖರ ನಾಗೂರ



## ವಚನ ಚಿಂತನ 293

**ಅಂಗದ ಅರಿವೇ ಲಿಂಗದ ಅರಿವು**

*ಅಂಗದ ಗುಣವನರತು ಲಿಂಗವನ-*
*ರಿಯಬೇಕೆಂಬರು*
*ಅಂಗವರತ ಮತ್ತೆ ಲಿಂಗಕ್ಕೆ ಕುರುಹುಂಟೆ ?*
*ಅಂಗವೆ ಲಿಂಗ, ನಿರಂಗವೆ ಸಂಗ.*
*ಭಾವದ ಅಂಗವನರಿಯಬೇಕೆಂದನಂಬಿಗ ಚೌಡಯ್ಯ.*

*– ಅಂಬಿಗರ ಚೌಡಯ್ಯನವರು*

ಅಂಗ ಮತ್ತು ಲಿಂಗಗಳ ಅರಿಯುವಿಕೆ ಹಾಗೂ ಲಿಂಗದ ಇರುವಿಕೆಯನ್ನು ಅಂಬಿಗರ ಚೌಡಯ್ಯನವರು ಈ ವಚನದಲ್ಲಿ ಸ್ಪಷ್ಟಿಕರಿಸಿದ್ದಾರೆ. ಕೆಲವರು ಮೊದಲು ನಮ್ಮ ಅಂಗವನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕು ನಂತರ ಲಿಂಗದ ಬಗ್ಗೆ ತಿಳಿಯಲು ಸಾಧ್ಯವೆನ್ನುತ್ತಾರೆ. ಅವರಿಗೆ ಇಲ್ಲಿ ಚೌಡಯ್ಯುನವರು ಪ್ರಶ್ನಿಸುತ್ತ, ಅಂಗವನ್ನು ಅರಿತ ಮೇಲೆ ಮತ್ತೆ ಲಿಂಗವನ್ನು ಪ್ರತ್ಯೇಕವಾಗಿ ಅರಿಯುವ ಅವಶ್ಯಕತೆ ಇರುವುದಿಲ್ಲ (ಅಂಗವರತ ಮತ್ತೆ ಲಿಂಗಕ್ಕೆ ಕುರುಹುಂಟೆ?) ವೆನ್ನುತ್ತಾರೆ. ಕಾರಣವೆನೆಂದರೆ ಅಂಗ ಮತ್ತು ಲಿಂಗವನ್ನು ಪ್ರತ್ಯೇಕಿಸಿ ನೋಡಲು ಸಾದ್ಯವಿಲ್ಲ. (ಅಂಗವೆ ಲಿಂಗ) ಅಂಗದ ಅರಿವು ಎಂದರೆ ಅಂಗದಲ್ಲಿಯ ಚೈತನ್ಯದ ಅರಿವು ಅದೇ ಲಿಂಗಭಾವ. ಅಂಗ ಲಿಂಗದ ಪ್ರತ್ಯೇಕ ಭಾವ ಅಳಿದವರಿಗೆ ಮಾತ್ರ ಈ ಅರಿವು (ನಿರಂಗವೆ ಸಂಗ)ಸಾದ್ಯವೆಂದಿದ್ದಾರೆ. ತೋರಿಕೆಯ ಅಂಗಭಾವ ಅಳಿದು ಭಾವದ ಅಂಗವನರಿಯಬೇಕೆಂದಿರುವರು.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ಟಿಪ್ಪು ಭಾವಚಿತ್ರಕ್ಕೆ ಅವಮಾನ: ಗೋಲಗೇರಿಯಲ್ಲಿ ಪ್ರತಿಭಟನೆ



**ಉದಯರಶ್ಮಿ ನ್ಯೂಸ್**

**ಗೋಲಗೇರಿ:** ರಾಯಚೂರು ಜಿಲ್ಲೆಯ ಸಿರವಾರ್ ಪಟ್ಟಣದಲ್ಲಿ ಹಜರತ್ ಟಿಪ್ಪು ಸುಲ್ತಾನ್ ರವರ ಭಾವಚಿತ್ರಕ್ಕೆ ಆದ ಅಪಮಾನ ಖಂಡಿಸಿ, ಗೋಲಗೇರಿಯಲ್ಲಿ ಕರ್ನಾಟಕ ರಾಜ್ಯ ಟಿಪ್ಪು ಸುಲ್ತಾನ್ ಅಭಿಮಾನಿಗಳ ಮಹಾ ವೇದಿಕೆ(ರಿ) ಹಾಗೂ ಟಿಪ್ಪು ಕ್ರಾಂತಿ ಸೇನೆ(ರಿ) ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಗ್ರಾಮ ಲೆಕ್ಕಾಧಿಕಾರಿಗಳ ಮುಖಾಂತರ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಿ ರಾಜ್ಯದಿಂದ ಗಡಿಪಾರು ಮಾಡುವಂತೆ ಗೃಹಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಟಿಪ್ಪು ಸುಲ್ತಾನ್ ಅಭಿಮಾನಿಗಳ ಮಹಾವೇದಿಕೆಯ ಜಿಲ್ಲಾ ಯುವ ಅಧ್ಯಕ್ಷ ಮೋದಿನ್ ಶಾಬಾದಿ ಮಾತನಾಡಿ, ರಾಯಚೂರು ಜಿಲ್ಲೆಯ ಸಿರವಾರ್ ಪಟ್ಟಣದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರ ಟಿಪ್ಪು ಸುಲ್ತಾನ್ ಅವರ ಭಾವಚಿತ್ರಕ್ಕೆ ಅವಮಾನ ಮಾಡಿದ ನೀಚ ಮನಸ್ಸಿನ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಆಗ್ರಹಿಸಿದರು

ತಳವಾರ ಸಮಾಜದ ಮುಖಂಡ ಮಡಿವಾಳ ನಾಯ್ಕೋಡಿ ಮಾತನಾಡಿ, ಮಹಾನ್ ನಾಯಕರ ಪ್ರತಿಮೆಗಳಿಗೆ ಅವಮಾನ ನಡೆಯುತ್ತಿರುವದು ಇಡೀ ನಾಗರೀಕ ಸಮಾಜ ತಲೆತಗ್ಗಿಸುವಂತಾಗಿದೆ. ಕೋಮುಗಲಭೆ ಉಂಟು ಮಾಡಿ ಸಮಾಜದ ಸಾಮರಸ್ಯವನ್ನು ಹಾಳುಮಾಡುತ್ತಿರುವ ಇಂತಹ ಕಿಡಿಗೇಡಿಗಳನ್ನು ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಶಿವು.ಹತ್ತಿ, ರವಿರಾಜ ದೇವರಮನಿ, ವಿಜುಗೌಡ ಬಿರಾದಾರ, ಶ್ರೀಶೈಲ ಜಾಲವಾದಿ, ಬಸವರಾಜ ಮಾರಲಭಾವಿ, ಸೈಪನ್ ಕೋರವಾರ, ಅಜೀಜ್ ಭಾಗವಾನ, ಸಲೀಮ್ ಭಾಗವಾನ, ರಮೇಶ ತಳವಾರ, ಸಂತೋಷ ಸಾಲಿ ಸೇರಿದಂತೆ ಅನೇಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಸಂವಿಧಾನ ದಿನಾಚರಣೆ ರಾಷ್ಟ್ರೀಯ ಹಬ್ಬದಂತೆ ಆಚರಿಸಿ



ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ಸಂವಿಧಾನ ದಿನಾಚರಣೆ ಅಂಗವಾಗಿ ಫೆಬ್ರುವರಿ 10 ರಿಂದ 14 ರವರೆಗೆ ನಡೆಯುವ ಸಂವಿಧಾನ ಜಾಗೃತಿ ಜಾಥಾ ಸ್ಥಬ್ದಚಿತ್ರ ಮೆರವಣಿಗೆಯನ್ನು ರಾಷ್ಟ್ರೀಯ ಹಬ್ಬದ ಮಾದರಿಯಲ್ಲಿ ಆಚರಿಸುವಲ್ಲಿ ಅಧಿಕಾರಿಗಳು ಸನ್ನದರಾಗಬೇಕು ಎಂದು ತಹಶೀಲ್ದಾರ ಯಮನಪ್ಪ ಸೋಮನಕಟ್ಟಿ ಹೇಳಿದರು.

ಪಟ್ಟಣದ ನೂತನ ಪುರಸಭೆಯ ಸಭಾಭವನದಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಫೆ, 10 ರಂದು ಮುತ್ತಗಿ ಗ್ರಾಮಕ್ಕೆ ಆಗಮಿಸುವ ಜಾಗೃತಿ ಜಾಥಾವನ್ನು ಸಕಲ ಸರ್ಕಾರಿ ಗೌರವದೊಂದಿಗೆ ಅದ್ದೂರಿಯಾಗಿ ಬರಮಾಡಿಕೊಳ್ಳಲಾಗುವದು ನಂತರ ಯರನಾಳ ಮಾರ್ಗವಾಗಿ ಜಾಗೃತಿ ನಾಲ್ಕು ದಿನಗಳ ಕಾಲ ಜಾಗೃತಿ ಜಾತಾ ತಾಲೂಕಿನ ವಿವಿಧ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಸಂಚರಿಸಲಿದೆ, ಸಂವಿಧಾನ ದಿನಾಚರಣೆ ಪ್ರಯುಕ್ತ ತಾಲೂಕಿನ ಎಲ್ಲ ಶಾಲಾ ಕಾಲೇಜುಗಳಲ್ಲಿ ಸಂವಿಧಾನದ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಕ್ಕಳಿಗೆ ವಿಶೇಷವಾಗಿ ಪ್ರಬಂದ ಸೇರಿದಂತೆ ವಿವಿಧ ಚಟುವಟಿಕೆಗಳನ್ನ ಏರ್ಪಡಿಸುವ ಮೂಲಕ ಮಕ್ಕಳಿಗೆ ಸಂವಿಧಾನದ ಮಹತ್ವವನ್ನು ತಿಳಿಸಲಾಗುತ್ತದೆ. ಫೆ, 11 ರಂದು ನಡೆಯುವ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಗುವದು. ಕಾರ್ಯಕ್ರಮದ ಯಶಸ್ವಿಗೆ ತಾಲೂಕಿನಲ್ಲಿ ನಾಲ್ಕು ಜನ ನೂಡಲ್ ಅಧಿಕಾರಿಗಳನ್ನ ನೇಮಿಸಲಾಗಿದೆ ಎಂದರು.

ಈ ಸಂಧರ್ಬದಲ್ಲಿ ಪುರಸಭೆ ಮುಖ್ಯಧಿಕಾರಿ ರುದ್ರೇಶ ಚಿತ್ತರಗಿ, ಸಮಾಜ ಕಲ್ಯಾಣ ಇಲಾಖೆ ಭವಾನಿ ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿ ವಸಂತ ರಾಠೋಡ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ವಿವಿಧ ಸಂಘಟನೆ ಸದಸ್ಯರು ಹಾಗೂ ಪುರಸಬೆ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಸ್ಪಷ್ಟನೆ

# ಗೃಹಲಕ್ಷ್ಮಿ ಯೋಜನೆ: ವಿಜಯಪುರ ಜಿಲ್ಲೆ ಮುಂಚೂಣಿ

ಉದಯರಶ್ಮಿ ನ್ಯೂಸ್



ವಿಜಯಪುರ: ಕಾರಜೋಳ ಬಳಿ ಬಾಕಿ ಉಳಿದಿರುವ 500 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ತಿಳಿಸಿದ್ದಾರೆ.

ಬಬಲೇಶ್ವರ ತಾಲೂಕಿನ ಕಾರಜೋಳ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಶ್ರೀ ಬೀರಲಿಂಗೇಶ್ವರ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಭಾರತ ಗ್ರಾಮಗಳ ದೇಶ. ಹಳ್ಳಿಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾದಂತೆ. ಇದರಿಂದ ಗ್ರಾಮ ಸ್ವರಾಜ್ಯ ಸಾಧ್ಯ ಎಂದು ರಾಷ್ಟ್ರಪಿತ ಮಹಾತ್ಮಾ ಗಾಂಧಿ ಹೇಳಿದ್ದರು. ಆವರ ಆಶಯದಂತೆ ನಮ್ಮ ಸರಕಾರ ರೈತರು, ಬಡವರು ಸೇರಿದಂತೆ ಎಲ್ಲ ಜಾತಿವರ್ಗಗಳ ಕಲ್ಯಾಣಕ್ಕಾಗಿ ಯೋಜನೆಗಳನ್ನು ರೂಪಿಸಿದೆ. ಪಂಚ ಗ್ಯಾರಂಟಿ ಯೋಜನೆಗಳ ಜಾರಿಯಿಂದಾಗಿ ಸಮಾಜದ ಎಲ್ಲ ವರ್ಗದ ಜನರಿಗೆ ಶಕ್ತಿ ತುಂಬಲಾಗುತ್ತಿದೆ. ಗೃಹಲಕ್ಷ್ಮಿ ಯೋಜನೆಯಲ್ಲಿ ವಿಜಯಪುರ ಜಿಲ್ಲೆ ಮುಂಚೂಣಿಯಲ್ಲಿದೆ. ಗೃಹಲಕ್ಷ್ಮಿ ಯುವನಿಧಿ, ಅನ್ನಭಾಗ್ಯ ಸೇರಿದಂತೆ ಎಲ್ಲ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಕೊಟ್ಟ ಮಾತುಗಳನ್ನು ಉಳಿಸಿಕೊಂಡು, ನುಡಿದಂತೆ ನಡೆಯುತ್ತಿದ್ದೇವೆ ಎಂದು ಅವರು ತಿಳಿಸಿದರು.

ಕಾರಜೋಳ ಬಳಿ ಸಕ್ಕರೆ ಕಾರ್ಖಾನೆ ನಿರ್ಮಾಣಕ್ಕೆ ಭೂಮಿ ನೀಡಿದ ರೈತರ ಕುಟುಂಬಗಳಿಗೆ ಉದ್ಯೋಗ ಕಲ್ಪಿಸಲು ಕ್ರಮ ಕೈಗೊಳ್ಳುತ್ತೇವೆ. ನಾನು ಜಲಸಂಪನ್ಮೂಲ ಸಚಿವನಾಗಿದ್ದಾಗ ರೂಪಿಸಿದ ನೀರಾವರಿ ಯೋಜನೆಗಳು ಈಗ ಉಂಟಾಗಿರುವ ಬರದ ತೀವ್ರತೆಯನ್ನು ಕಡಿಮೆ ಮಾಡಿವೆ. ಇದರಿಂದಾಗಿ ಪ್ರತಿವರ್ಷ ಬಳಸಲಾಗುತ್ತಿದ್ದ ನೀರಿನ ಟ್ಯಾಂಕರ್ ಗಳ ಬಳಕೆ ಗಣನೀಯವಾಗಿ ಕಡಿಮೆಯಾಗಿದೆ. ಬರಪೀಡಿತ ಜಿಲ್ಲೆ ಎಂದು ಹಣೆಪಟ್ಟಿ ಹೊತ್ತಿದ್ದ ವಿಜಯಪುರದ ಇತಿಹಾಸವನ್ನು ಬದಲಿಸಲಾಗುತ್ತಿದೆ. ಜಲಸಂಪನ್ಮೂಲ ಇಲಾಖೆಯಲ್ಲಿ ಮಾಡಿರುವಂತೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯಲ್ಲಿಯೂ ಛಾಪು ಮೂಡಿಸಲು ಯೋಜನೆಗಳನ್ನು ರೂಪಿಸಿದ್ದೇನೆ. ವಿಜಯಪುರ ಜಿಲ್ಲೆಯಲ್ಲಿ ಕನಿಷ್ಠ 10 ಸಾವಿರ ಉದ್ಯೋಗ ಸೃಷ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಫ್ಯಾಕ್ಟರಿ ಪ್ರಾರಂಭಿಸುವ ಗುರಿಯಿದೆ ಎಂದು ಅವರು ತಿಳಿಸಿದರು.

ಗ್ರಾಮಸ್ಥರು ತಮ್ಮ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಅದರಲ್ಲೂ ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಕಾಳಜಿ ವಹಿಸಬೇಕು ಎಂದು ಅವರು ಹೇಳಿದರು.

ಇದಕ್ಕೂ ಮುನ್ನ ಸಚಿವರು ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ದರ್ಶನ ಪಡೆದರು.

ಈ ಸಂದರ್ಭದಲ್ಲಿ ಮುಖಂಡರಾದ ಸೋಮನಾಥ ಕಳ್ಳಿಮನಿ, ಬಿ. ಡಿ. ಆಸಂಗಿ, ಸುಜಾತಾ ಕಳ್ಳಿಮನಿ, ಮಲ್ಲು ಪರಸಣ್ಣವರ, ರಾಜು ಕಂಬಾಗಿ, ಪಾಂಡು ಜಾಧವ, ರಾಚಯ್ಯ ಮಠಪತಿ, ಕಾಂತು ಒಡೆಯರ, ಪರಶುರಾಮ ಮಲಘಾಣ, ಸುರೇಶ ಜಾಧವ, ಬಸವರಾಜ ಪಾಯ್ಲಿ, ಶಿವಪ್ಪ ತಳವಾರ, ಮುದಕಪ್ಪ ಹಳಿಜೋಳ, ಕಲ್ಲಯ್ಯ ಹಿರೇಮಠ, ಯಲ್ಲಪ್ಪ ಆಸಂಗಿ ಮುಂತಾದವರು ಉಪಸ್ಥಿತರಿದ್ದರು.

# ಬಸವ ಜನ್ಮಸ್ಥಳದ ಅಭಿವೃದ್ಧಿಗೆ ಡಿಸಿಎಂಗೆ ಮನವಿ

ಉದಯರಶ್ಮಿ ನ್ಯೂಸ್



ಬಸವನಬಾಗೇವಾಡಿ: ಹನ್ನೆರಡನೆಯ ಶತಮಾನದಲ್ಲಿ ವಚನದ ಮೂಲಕ ಸಮಾನತೆಯ ಕ್ರಾಂತಿಯನ್ನು ಮಾಡಿದ ವಿಶ್ವ ಗುರು ಬಸವಣ್ಣನವರ ಜನ್ಮ ಸ್ಥಳವನ್ನು ಅಭಿವೃದ್ಧಿ ಪಡಿಸಬೇಕೆಂದು ರಾಷ್ಟ್ರೀಯ ಬಸವಸೈನ್ಯ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ ಅವರು ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

ಪಟ್ಟಣದ ಬಸವೇಶ್ವರ ದೇವಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮನವಿ ಸಲ್ಲಿಸಿದ ಅವರು ಮಾತನಾಡಿ, ವಿಶ್ವಗುರು ಬಸವಣ್ಣನವರನ್ನು ಕರ್ನಾಟಕ ರಾಜ್ಯದ ಸಾಂಸ್ಕೃತಿಕ ನಾಯಕರನ್ನಾಗಿ ಮಾಡಲು ಸಚಿವ ಸಂಪುಟದಲ್ಲಿ ಸಭೆಯು ಘೋಷಣೆ ಮಾಡಿದಕ್ಕೆ ರಾಜ್ಯದ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ, ಸಚಿವರನ್ನು ಅಭಿನಂದಿಸಲು ಸಮಸ್ತ ಬಸವಾಭಿಮಾನಿಗಳು ಸಿದ್ದರಾಗಿದ್ದೇವೆ. ಬೃಹತ್ ಅಭಿನಂದನಾ ಸಮಾವೇಶವನ್ನು ಏರ್ಪಡಿಸಲು ತಾವುಗಳು ಒಂದು ದಿನಾಂಕವನ್ನು ನಿಗದಿಪಡಿಸಿ ಸಮಯವನ್ನು ಕೊಟ್ಟರೆ ನಾವು ಒಂದು ಲಕ್ಷದವರೆಗೆ ಬಸವಭಕ್ತರನ್ನೂ ಸೇರಿಸಿ ಬೃಹತ್ ಸಮಾವೇಶ ಮಾಡುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಸಚಿವ ಶಿವಾನಂದ ಪಾಟೀಲ ,ಶಾಸಕ ಅಶೋಕ ಮನಗೂಳಿ, ಬಸವೇಶ್ವರ ಬ್ಯಾಂಕಿನ ಅಧ್ಯಕ್ಷ ಲೋಕನಾಥ ಅಗರವಾಲ, ಹರೀಶ ಅಗರವಾಲ, ಅನಿಲ ಅಗರವಾಲ, ಬ್ಲಾಕ್ ಅಧ್ಯಕ್ಷ ಸುರೇಶ ಹರಿವಾಳ, ಬಸವರಾಜ ರಾಯಗೊಂಡ, ಜಟ್ಟಿಂಗರಾಯ ಮಾಲಗಾರ, ಮನೋಜ ಅಗರವಾಲ, ರವಿ ಬಾವಿಕಟ್ಟಿ ಸೇರಿದಂತೆ ಅನೇಕರು ಇದ್ದರು.

# ಮೂಲನಂದೀಶ್ವರ ದರ್ಶನ ಪಡೆದ ಡಿಸಿಎಂ ಶಿವಕುಮಾರ

ಉದಯರಶ್ಮಿ ನ್ಯೂಸ್



ಬಸವನಬಾಗೇವಾಡಿ: ಪಟ್ಟಣಕ್ಕೆ ಮೊದಲ ಬಾರಿಗೆ ಆಗಮಿಸಿದ ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರನ್ನು ಶನಿವಾರ ಸಚಿವ ಶಿವಾನಂದ ಪಾಟೀಲ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು, ಅಪಾರ ಸಂಖ್ಯೆಯ ಕಾರ್ಯಕರ್ತರು ಜಯಘೋಷದೊಂದಿಗೆ ಅದ್ದೂರಿಯಾಗಿ ಸ್ವಾಗತಿಸಿಕೊಂಡರು.

ಕಲಬುರಗಿಯಿಂದ ರಸ್ತೆ ಮಾರ್ಗವಾಗಿ ತಾಲೂಕಿನ ದಿಂಡವಾರ ಗ್ರಾಮದ ಮೂಲಕ ಬಸವನಬಾಗೇವಾಡಿ ಮತಕ್ಷೇತ್ರಕ್ಕೆ ಪ್ರವೇಶಿಸಿದ ಡಿ.ಕೆ ಶಿವಕುಮಾರ ತಾಲೂಕಿನ ಇಂಗಳೇಶ್ವರ ಗ್ರಾಮದಲ್ಲಿರುವ ಬೀರಲಿಂಗೇಶ್ವರ ದೇವಸ್ಥಾನ ಹಾಗೂ ವಚನ ಶಿಲಾ ಮಂಟಪಕ್ಕೆ ಭೇಟಿ ದರ್ಶನ ಪಡೆದುಕೊಂಡ ನಂತರ ಸನ್ಮಾನ ಸ್ವೀಕರಿಸಿದರು.

ಬಸವನನಬಾಗೇವಾಡಿ ಪಟ್ಟಣದ ಆರಾಧ್ಯ ದೈವ ಮೂಲ ನಂದೀಶ್ವರನ ದರ್ಶನ ಪಡೆದರು.

ಇದೇ ಸಂದರ್ಭದಲ್ಲಿ ನಂದೀಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿ ಮೂಲನಂದೀಶ್ವರನಿಗೆ ಹಣೆ ಹಚ್ಚಿ ನಮಸ್ಕರಿಸಿರುವುದು ವಿಶೇಷ ಗಮನ ಸೆಳೆಯಿತು.

ಮೂಲ ನಂದೀಶ್ವರನ ದರ್ಶನ ಪಡೆದ ಅವರು ಬಸವೇಶ್ವರ ವೃತ್ತದಲ್ಲಿರುವ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಪಟ್ಟಣದ ಹೃದಯ ಭಾಗದಲ್ಲಿ ನಿರ್ಮಾಣವಾಗಿರುವ ಮೆಗಾಮಾರುಕಟ್ಟೆಯ ಕಾಮಗಾರಿ ಪರಿಶೀಲಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ಮನಗೂಳಿ ಹಿರೇಮಠದ ಕಾರ್ಯಕ್ರಮಕ್ಕೆ ತೆರಳಿದರು.

ಈ ಸಂದರ್ಭದಲ್ಲಿ ಸಿದ್ದಲಿಂಗ ಸ್ವಾಮೀಜಿ, ಸಚಿವ ಶಿವಾನಂದ ಪಾಟೀಲ, ವಿಧಾನಪರಿಷತ್ತಿನ ಸದಸ್ಯ ಪ್ರಕಾಶ ರಾಠೋಡ, ಶಾಸಕ ಅಶೋಕ ಮನಗೂಳಿ, ವಿಡಿಸಿಸಿ ಬ್ಯಾಂಕ್ ನಿರ್ದೇಶಕಿ ಸಂಯುಕ್ತಾ ಪಾಟೀಲ, ನಂದಿ ಸಕ್ಕರೆ ಕಾರ್ಖಾನೆ ನಿರ್ದೇಶಕ ಸತ್ಯಜೀತ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ರಾಜ್ಯ ಸಹಕಾರಿ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ, ಬಸವಸೈನ್ಯ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ, ಕಾಂಗ್ರೆಸ ಜಿಲ್ಲಾಧ್ಯಕ್ಷ ರಾಜು ಆಲಗೂರ, ಮುಖಂಡರಾದ ಬಸವರಾಜ ಗೊಳಸಂಗಿ, ಲೋಕನಾಥ ಅಗರವಾಲ, ಬಸಣ್ಣ ದೇಸಾಯಿ, ಭರತು ಅಗರವಾಲ, ಶೇಖರ ಗೊಳಸಂಗಿ, ವಿದ್ಯಾರಾಣಿ ತುಂಗಳ, ಜಟ್ಟಿಂಗರಾಯ ಮಾಲಗಾರ, ರವಿ ಚಿಕ್ಕೊಂಡ, ರವಿ ರಾಠೋಡ ಬಸವರಾಜ ಹಾರಿವಾಳ, ಮಲ್ಲಿಕಾರ್ಜುನ ನಾಯಕ, ಬಸವರಾಜ ರಾಯಗೊಂಡ, ಬಸವರಾಜ ಕೋಟಿ, ರವಿ ಬಾವಿಕಟ್ಟಿ, ವಿಶ್ವನಾಥ ನಿಡಗಂದಿ, ರಫೀಕ್ ಪಕಾಲಿ, ತೌಸೀಫ್ ಗಿರಗಾಂವಿ, ಜಕ್ಕಪ್ಪ ಮೀಸಿ, ಕಾಶಿನಾಥ ರಾಠೋಡ, ಸಿ.ಎಸ್. ಪಾಟೀಲ, ಸಂಕನಗೌಡ ಪಾಟೀಲ, ಪಿಂಟುಗೌಡ ಪಾಟೀಲ, ಜಗದೇವಿ ಗುಂಡಳ್ಳಿ, ರುಕ್ಮಿಣಿ ರಾಠೋಡ ಇತರರು ಇದ್ದರು.

## ಕಾವ್ಯರಶ್ಮಿ

# ಅಂತರಾತ್ಮ


– ರೇಖಾ ಮಾಳಿ, ಜಮಖಂಡಿ
("ನಮ್ಮ ಕಥಾ ಅರಮನೆ" ಬರಹಗಾರರು)




ಮನದ ಕೊಳೆ ತೊಳೆಯ ಬಂದ ಪರಮಾತ್ಮ
ಸತ್ಯ ಶೋಧನೆಯಲಿ ತೊಡಗಿಸಿದ "ಅಂತರಾತ್ಮ"
ಅನಾವರಣವಾಗಲಿ ಚಿಂತನೆಯ ಸತ್ಯಾತ್ಮ
ಕರುಣವುಳ್ಳ ಹೃದಯವಿದ್ದವನೇ ಪುಣ್ಯಾತ್ಮ ॥

ಮಜ್ಜಿಗೆ ಕಡೆದ ಬೆಣ್ಣೆಯಂತೆ ಮನದಿ
ಸುವಿಚಾರಗಳು ಹರಿದು ಬರಲಿ ಅಂತರಾಳದಿ
ಅಂತರಾತ್ಮದಲಿ ಬೆಳಗಲಿ ಅಂತಃಕರಣದ ದೀವಿಗೆ
ಅಭಯ ಹಸ್ತವಾಗಲಿ ಮನನೊಂದ ಜೀವಿಗೆ ॥

ಭಕ್ತಿಯ ಬೀಜವ ಹೃದಯದಿ ಬಿತ್ತಿದ ಮಾಯೆ
ಹರಿ ನಾಮ ಸ್ಮರಣೆಯೇ ಎನ್ನಂತರಂಗದ ಛಾಯೆ
ಎನ್ನ ಮನವೇ ಸಿಲುಕಿ ಬಿಡು ಭಕ್ತಿಭಾವದೊಳಗೆ
ಪುಣ್ಯ ಕಾರ್ಯದಿ ಬದುಕಿನ ಸಾರ್ಥಕತೆಯೆಡೆಗೆ ॥



# ದೇವರ ಆಟ



## ಭಾವರಶ್ಮಿ

– ಹೇಮಲತಾ
("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ಅವಳೊಬ್ಬ ಸುಂದರಿ. ಕಾಲೇಜಿನಲ್ಲಿ , ರಸ್ತೆಯಲ್ಲಿ ಓಡಾಡುವಾಗ ಸಮಾರಂಭಗಳಲ್ಲಿ ಅವಳೇ ಕೇಂದ್ರ ವ್ಯಕ್ತಿ. ತನ್ನ ಸೌಂದರ್ಯದಿಂದ ಸೂಜಿಗಲ್ಲಿನಂತೆ ಜಗವನ್ನೇ ಸೆಳೆಯುತ್ತಿದ್ದವಳ ಅಹಂಕಾರವೂ ಸಹ ದೊಡ್ಡ ಮಟ್ಟದಲ್ಲೇ ಇತ್ತು.

ಇರುವುದೆಲ್ಲವ ಬಿಟ್ಟು........ ಎಂಬಂತೆ ಅವಳು ಒಲಿದಿದ್ದು ತಾನು ಸದಾ ಪಂಚರ್ ಹಾಕಿಸುತ್ತಿದ್ದ ಅವಿದ್ಯಾವಂತ ಯುವಕನಿಗೆ. ಅವನ ನಗೆ, ಹಣೆ ಮೇಲೆ ಬಿದ್ದ ಮುಂಗುರುಳನ್ನು ಹಿಂದೆ ಸರಿಸಲು ತಲೆ ಕೊಡವುತ್ತಿದ್ದ ಪರಿ ಅವಳಿಗೆ ಬಹಳ ಮೆಚ್ಚುಗೆ ಆಗಿ ಈಗ ಪ್ರೀತಿಯ ಬಲೆಯಲ್ಲಿ ಸಿಕ್ಕಿಬಿದ್ದಿದ್ದಳು. ಎರಡು ವರ್ಷದ ನಂತರ ಇಬ್ಬರೂ ಓಡಿ ಹೋಗಿ ಮದುವೆಯಾಗುವ ನಿರ್ಧಾರಕ್ಕೆ ಬಂದರು. ಶ್ರೀಮಂತನ ಕುವರಿ. ಮನೆಯ ತಿಜೋರಿಯಲ್ಲಿ ಭದ್ರವಾಗಿರುವ ಒಡವೆ ಹಣವನ್ನು ತಾನು ತಮ್ಮ ಮುಂದಿನ ಭವಿಷ್ಯಕ್ಕಾಗಿ ಹೊತ್ತ ತರುವ ಭರವಸೆ ಕೊಟ್ಟಿದ್ದಳು. ಒಬ್ಬಳೇ ಮಗಳು. ಅಪ್ಪ ಅಮ್ಮ ಒಂದು ದಿನವೂ ತನ್ನನ್ನು ಅಗಲಿರಲು ಶಕ್ತರಲ್ಲ.

ಮನೆಗೇ ಮಗಳು ಅಳಿಯನನ್ನು ಕರೆಸಿಕೊಳ್ಳುತ್ತಾರೆ ತಂದೆಯ ಗಾರ್ಮೆಂಟ್ ಫ್ಯಾಕ್ಟರಿ ಉಸ್ತುವಾರಿ ಮಹೇಶನಿಗೆ ಸಿಗುತ್ತದೆ. ತಾನು ಮುನ್ನಿನಂತೆ ಆರಾಮವಾಗಿಯೇ ಇರಬಹುದೆಂಬ ಲೆಕ್ಕಚಾರ ಅವಳದ್ದು.

ಅದಕ್ಕೆ ಮಹೇಶನ ಪೂರ್ಣ ಸಮ್ಮತಿ ಇತ್ತು. ಈ ಇಬ್ಬರ ಪ್ರಣಯ ಪ್ರಸಂಗವನ್ನು ಉಮ ತನ್ನ ಗೆಳತಿ ಸರೋಜಳಿಗೆ ಮಾತ್ರ ಹೇಳಿದ್ದಳು. ಓಡಿ ಹೋಗುವ ದಿನದ ಬಗ್ಗೆಯೂ ಗೆಳತಿಗೆ ಗೊತ್ತಿತ್ತು. ಕೆಳ ಮಧ್ಯಮ ವರ್ಗದ ಅವಳು ಶ್ರೀಮಂತರನ್ನು ಮನದಲ್ಲೇ ದ್ವೇಷಿಸುತ್ತಾ ಮೇಲೆ ಮೇಲೆ ವೈಯಕ್ತಿಕ ಲಾಭಕ್ಕೆ ಅವರ ಬಾಲ ಬಡಿಯುತ್ತಿದ್ದಳು. ಉಮಾಳು ಓಡಿ ಹೋಗುವುದು ಕೇಳಿ ಅವಳ ಹೊಟ್ಟೆಯುರಿ ಜಾಸ್ತಿ ಆಯಿತು. ಹತ್ತನೇ ತರಗತಿಗೇ ಶಾಲೆ ಬಿಟ್ಟಿದ್ದ ಅವಳಿಗೆ ಸದಾ ಮದುವೆಯದೇ ಬಣ್ಣ ಬಣ್ಣದ ಕನಸು. ಅದರೆ ಅವಳ ಬಲೆಗೆ ಯಾವ ಹುಡುಗ ಸಹ ಬಿದ್ದಿರಲಿಲ್ಲ. ಗೆಳತಿ ಓಡಿ ಹೋಗುವ ಸಮಯ ನಸುಗತ್ತಲಲ್ಲಿ ಮಹೇಶನಿಗಾಗಿ ಕಾದು ನಿಂತು ರೈಲು ಸ್ವಲ್ಪ ಚಲಿಸುತ್ತಿದ್ದಂತೆ ರೈಲು ಹತ್ತುವ ಉಪಾಯ, ಎಲ್ಲವನ್ನೂ ಸರೋಜಳಿಗೆ ಉಮಾ ಒಂದು ದಿನ ತೋರಿಸಿದ್ದಳು.

ನಿರ್ದಿಷ್ಟ ದಿನ ಬಂತು. ಅಲ್ಲಿ ನಿಂತಿದ್ದ ಸರೋಜಳನ್ನು ಮಹೇಶ ಒತ್ತಾಯವಾಗಿ ಎಳೆದೊಯ್ದು ರೈಲು ಹತ್ತಿಸಿದ. ಯಾರಿಗೂ ಗುರುತು ಸಿಗಬಾರದೆಂದು ಕಣ್ಣಳನ್ನು ಬಿಟ್ಟು ಪೂರಾ ಮುಖ ಮುಚ್ಚಿಕ್ಕೊಂಡಿದ್ದಳು. ರೈಲು ಸಾಕಷ್ಟು ಮೈಲು ದೂರ ಚಲಿಸಿಯಾಗಿತ್ತು. ಬೇರೆ ಭೋಗಿಯಲ್ಲಿ ಕುಳಿತಿದ್ದ ಮಹೇಶ ಮನೆ ಕೆಲಸ ಮಾಡಲು ಸೌದಿ ರಾಷ್ಟ್ರಗಳಿಗೆ ಹುಡುಗಿಯರನ್ನು ಕಳಿಸುವ ಏಜೆನ್ಸಿ ಜೊತೆಗೆ ನಂಟನ್ನಿಟ್ಟುಕೊಂಡಿದ್ದ. ಉಮಾಳ ಒಡವೆ ದುಡ್ಡು ಕಸಿದು ಅವಳನ್ನೂ ಅಲ್ಲಿಗೇ ಕಳಿಸಲು ಮುಂಚಿತ ಹಣ ಏಜೆನ್ಸಿಯಿಂದ ಪಡೆದಿದ್ದ. ಒಂದು ನಿಲ್ದಾಣದಲ್ಲಿ ಉಮಾಳನ್ನು ಬಂದು ನೋಡಿದ. ಅವಳು ಸೂಟ್ ಕೇಸ್ ಬಳಸಿ ಗಾಢ ನಿದ್ರೆಯಲ್ಲಿದ್ದಳು. ರಾತ್ರಿ ಹನ್ನೆರಡು ದಾಟಿತ್ತು. ಎಲ್ಲಾ ಪಯಣಿಗರೂ ನಿದ್ರೆಯ ಮೋಡಿಯಲ್ಲಿ ಮೈ ಮರೆತಿದ್ದರು. ಅವನು ಉಪಾಯವಾಗಿ ಆ ಸೂಟ್ ಕೇಸ್ ತೆಗೆದುಕೊಂಡು ರೈಲಿಳಿದು ಮರೆಯಲ್ಲಿ ನಿಂತು ರೈಲು ಚಲಿಸುವುದನ್ನು ನೋಡಿ ನಸು ನಕ್ಕ.

ಎಷ್ಟೊಂದು ಹಣ ವಡವೆ! ಎಂದು ಬಾಯ್ಬಿಡುತ್ತಾ ಹೊರ ಹೊರಟ. ಅವನ ಅರಿವಿಗೆ ಬಾರದ ಸಂಗತಿ ಒಂದು ನಡೆದಿತ್ತು. ತನ್ನ ಬಟ್ಟೆ ಬರೆ ಸೂಟ್ ಕೇಸ್ ನಲ್ಲಿಟ್ಟು ಗೆಳತಿಗೆ ರೈಲು ಸಮಯಕ್ಕೆ ತರುವಂತೆ ಸರೋಜಿನಿಯ ಕೈಯ್ಯಲ್ಲಿ ಉಮ ಕೊಟ್ಟಿದ್ದಳು. ತನ್ನ ಗುರುತು ಸಿಗಬಾರದೆಂದು ಸರೋಜ ತನ್ನ ದುಪ್ಪಟ್ಟದಿಂದ ಮುಖ ಮುಚ್ಚಿಕೊಂಡು ನಿಂತಿದ್ದ ಅವಳನ್ನೇ ಮಹೇಶ ಉಮಾ ಎಂದು ಬಾವಿಸಿ ರೈಲಿಗೆ ಹತ್ತಿಸಿ, ಆ ಸೂಟ್ ಕೇಸ್ ಕದ್ದು ಓಡಿ ಹೋಗಿದ್ದ. ವ್ಯಾನಿಟಿ ಬ್ಯಾಗ್ ನಲ್ಲಿ ಒಡವೆ ದುಡ್ಡು ತುಂಬಿಕೊಳ್ಳಲು ಹೋಗುತ್ತಿದ್ದ ಉಮ ಕಾರ್ಪೆಟ್ ಎಡವಿ ಕೆಳಗೆ ಬಿದ್ದು



ಕಾಲು ಹೇರ್ ಲೈನ್ ಫ್ರಾಕ್ಚರ್ ಆಗಿ ಕಾಲ್ಗಳನ್ನು ಅಲ್ಲಾಡಿಸಲು ಅಸಾಧ್ಯವಾಗಿ ತಾಯಿ ತಂದೆಯ ಸಹಾಯದಿಂದ ಮಂಚದ ಮೇಲೆ ಮಲಗಿ ಡಾ. ಕೊಟ್ಟಿದ್ದ ನೋವು ನಿವಾರಕ, ನಿದ್ರೆಯ ಇಂಜೆಕ್ಷನ್ ತೆಗೆದುಕೊಂಡು ನಿದ್ರೆಗೆ ಜಾರಿ ಮೈಮರೆತು ಮಲಗಿದ್ದಳು. ಮಹೇಶ ಇಂಗು ತಿಂದ ಮಂಗನಾಗಿದ್ದ.

## ಸಂಗನಬಸವ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ & ಧರ್ಮ ಸಭೆಯಲ್ಲಿ ಸಚಿವ ಎಂ.ಬಿ.ಪಾಟೀಲ ಅಭಿಮತ

# ಪಂಚಪೀಠ-ವಿರಕ್ತಮಠಗಳು ಲಿಂಗಾಯತ ಉಪಪಂಗಡಗಳನ್ನು ಒಗ್ಗೂಡಿಸಲಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಸಮುದಾಯದ ಸರ್ವಾಂಗೀಣ ಏಳಿಗೆಗಾಗಿ ಪಂಚಪೀಠಗಳು ಮತ್ತು ವಿರಕ್ತಮಠಗಳು ಸೇರಿಕೊಂಡು ಲಿಂಗಾಯತ ಎಲ್ಲ ಒಳಪಂಗಡಗಳನ್ನು ಒಗ್ಗೂಡಿಸಿ ಕೇಂದ್ರ ಮತ್ತು ರಾಜ್ಯದಲ್ಲಿ ಮೀಸಲಾತಿ ಪಡೆಯುವಂತಾಗಬೇಕು. ಇದಕ್ಕೆ ರಂಭಾಪುರಿ ಜಗದ್ಗುರುಗಳು ನೇತೃತ್ವ ವಹಿಸಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಮನಗೂಳಿಯಲ್ಲಿ ಇಂದು ಶನಿವಾರ ಸಂಸ್ಥಾನ ಹಿರೇಮಠ ಆಯೋಜಿಸಿದ್ದ ಶತಾಯುಷಿ ಶ್ರೀ ಸಂಗನಬಸವ ಕಲ್ಯಾಣ ಮಂಟಪ ಲೋಕಾರ್ಪಣೆ ಹಾಗೂ ಉಭಯ ಶ್ರೀಗಳ ಧ್ವನಿ ಸುರುಳಿ ಬಿಡುಗಡೆ ಮತ್ತು ಸಂಗನಬಸವ ಶ್ರೀ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಧರ್ಮ ಸಭೆಯಲ್ಲಿ ಪಾಲ್ಗೊಂಡ ಸಚಿವರು, ಭಕ್ತರ ದೈವ ಅಭಿನವ ಧ್ವನಿಸುರುಳಿ ಬಿಡುಗಡೆ ಮಾಡಿ ಮಾತನಾಡಿದರು.

ಪಂಚಪೀಠಗಳು ಮತ್ತು ವಿರಕ್ತಮಠಗಳು ಲೋಪದೋಷಗಳನ್ನು ಸರಿಪಡಿಸಲು ಲಿಂಗಾಯಿತ ಸಮುದಾಯದ ಉಪಪಂಗಡಗಳನ್ನು ಒಗ್ಗೂಡಿಸಬೇಕು. ಎಲ್ಲ ಉಪಪಂಗಡಗಳಿಗೆ ರಾಜ್ಯದಲ್ಲಿ 2ಎ ಮತ್ತು ಕೇಂದ್ರದಲ್ಲಿ ಹಿಂದುಳಿದ ವರ್ಗಗಳಲ್ಲಿ ಮೀಸಲಾತಿಯ ಪಡೆಯಬೇಕು. ಎಲ್ಲ ಉಪಪಂಗಡಗಳನ್ನು ಒಂದೇ ಸೂರಿನಲ್ಲಿ ಸೇರಿಸದಿದ್ದರೆ ಅನ್ಯಾಯವಾಗುತ್ತವೆ. ಇದರಲ್ಲಿ ಯಾವ ಪ್ರತಿಷ್ಠೆಯೂ ಇಲ್ಲ. ರಂಭಾಪುರಿ ಶ್ರೀಗಳು ನೇರ, ಸ್ಪಷ್ಟ ನುಡಿಗಳಿಂದ ನಮ್ಮೆಲ್ಲರನ್ನು ಒಗ್ಗೂಡಿಸುವ ಕೆಲಸ ಮಾಡಿದ್ದಾರೆ. ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಕಾರಣರಾಗಿದ್ದಾರೆ. ಶ್ರೀಗಳು ನೇತೃತ್ವ ವಹಿಸಿಕೊಂಡು ಮುಂದಡಿ ಇಡದಿದ್ದರೆ ಸಮಾಜದ ಶಕ್ತಿ ಕಡಿಮೆಯಾಗಲಿದೆ. ಈಗ ಎಲ್ಲ ಉಪಪಂಗಡಗಳನ್ನು ಸೇರಿಸಿದರೆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಲಿಂಗಾಯಿತರ ಶೇ.17 ರಷ್ಟಿದ್ದಾರೆ. ನಾನಾ ಕಾರಣಗಳಿಂದ ಬಿಟ್ಟು ಹೋಗಿರುವ ಪ್ರತಿಯೊಂದು ಉಪಪಂಗಡಗಳನ್ನು ಒಟ್ಟಿಗೆ ಸೇರಿಸಿದರೆ ಈ ಪ್ರಮಾಣ ಶೇ. 30ಕ್ಕೆರಲಿದೆ. ಈ ನಿಟ್ಟಿನಲ್ಲಿ ಈಗಿನಿಂದಲೇ ಕೆಲಸವಾಗಬೇಕು ಎಂದು ಅವರು ಹೇಳಿದರು.




ಹರಿದು ಹಂಚಿ ಹೋಗಿರುವ ಲಿಂಗಾಯತ ಸಮುದಾಯವನ್ನು ಒಂದೆಡೆ ಸೇರಿಸಿ ಧರ್ಮ ಜಾಗೃತಿ, ಶಿಕ್ಷಣ ಪ್ರಸಾರ, ಬಸವಾದಿ ಶರಣ-ರ ಸಂಸ್ಕೃತಿ ಮುಂದುವರೆಸುವ ಹಿನ್ನೆಲೆಯಲ್ಲಿ 1904ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಸ್ಥಾಪನೆಯಾಯಿತು. ಸಿರಸಂಗಿ ಲಿಂಗರಾಜರ ತ್ಯಾಗ, ಅರಟಾಳ ರುದ್ರಗೌಡರ ಸಾಮಾಜಿ-ಕ ಕಳಕಳಿಯಿಂದಾಗಿ ವೀರಶೈವ ಮಹಾಸಭೆ ಹಾಗೂ ಸಿರಸಂಗಿ ಟ್ರಸ್ಟ್ ಪ್ರಾರಂಭವಾಗಿವೆ. ಅಷ್ಟೇ ಅಲ್ಲ, ಅವರ ಪ್ರಯತ್ನದಿಂದಾಗಿ 100 ವರ್ಷಗಳ ಹಿಂದೆಯೇ ವಿಜಯಪುರ, ಬಾಗಲಕೋಟೆ, ಬೆಳಗಾವಿ ಸೇರಿದಂತೆ ಜಿಲ್ಲೆಗೊಂದರಂತೆ ಲಿಂಗಾಯತ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾಗಿವೆ. ಈಗ ಮತ್ತೊಮ್ಮೆ ಸಮಾಜಕ್ಕೆ ನ್ಯಾಯ ಒದಗಿಸಲು ಎಲ್ಲರನ್ನೂ ಒಗ್ಗೂಡಿಸಿ ಮೀಸಲಾತಿ ಕೊಡಿಸುವ ಕೆಲಸವಾಗಬೇಕು ಎಂದು ಅವರು ಹೇಳಿದರು.

ವೀರಶೈವ ಲಿಂಗಾಯತ ಮಠಗಳು ನಮ್ಮೆಲ್ಲರನ್ನು ಸನ್ಮಾರ್ಗದತ್ತ ಕೊಂಡೊಯ್ಯುತ್ತಿವೆ. ಮನಗೂಳಿ ಸ್ವಗ್ರಾಮದ ಶಿಷ್ಯ ತಪಶೆಟ್ಟಿಯವರ ಮನೆತನದ ಶ್ರೀ ರೇವಣಸಿದ್ಧ ಅವರು ಡಾ. ಮಹಾಂತ ಶಿವಾಚಾರ್ಯರಾಗಿ ಅವರು ಶ್ರೀಮಠದ ಜವಾಬ್ದಾರಿಯನ್ನು ಹೊತ್ತುಕೊಂಡು, ಅವರ ಅವಧಿಯಲ್ಲಿ ಮಠ ಹೆಚ್ಚು ಪ್ರಸಿದ್ಧಿಗೆ ಬಂದಿದೆ. ಅಪಾರ ಪಾಂಡಿತ್ಯ ಹೊಂದಿದ್ದ ಡಾ. ಮಹಾಂತ ಶಿವಾಚಾರ್ಯರು ಹಿರೇಮಠದ ಜಮೀನುಗಳನ್ನು ಅಭಿವೃದ್ಧಿಪಡಿಸಿದರು. ಅವರಲ್ಲಿದ್ದ ಅಪಾರ ಪಾಂಡಿತ್ಯ ಮತ್ತು ವಾಕ್ಚಾತುರ್ಯವನ್ನು ಗುರುತಿಸಿ, ಹ-ರಿಹರದ ಪಂಚಮಸಾಲಿ ಪೀಠದ ಪ್ರಥಮ ಜಗದ್ಗುರುಗಳಾಗಿ ನೇಮಕವಾಗಿ ಸಮಾಜ ಸೇವೆ ಮಾಡುವಾಗಲೇ ನಮ್ಮನ್ನು ಅಗಲಿದರು. ಈ ಮಠಕ್ಕೆ 16ನೇ ಪೀಠಾಧಿಪತಿಯಾಗಿ ನೇಮಕವಾಗಿರುವ ಹಾಲಿ ಪೀಠಾಧೀಶರಾದ ಶ್ರೀ ಅಭಿವನ ಸಂಗನಬಸವ ಶಿವಾಚಾರ್ಯರು ಯುವ ಸನ್ಯಾಸಿಗಳಾಗಿದ್ದು, ಈಗ ರಾಷ್ಟ್ರೀಯ ಹೆದ್ದಾರಿ ಸಮೀಪ ಭವ್ಯವಾದ ಕಲ್ಯಾಣ ಮಂಟಪ ಕಟ್ಟಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು ಸಾಗುವ ದಾರಿ ಇನ್ನೂ ದೀರ್ಘವಾಗಿದೆ. ಅವರು ಈ ಭಾಗದ ಎಲ್ಲರ ಪ್ರೀತಿಗೂ ಪಾತ್ರರಾಗಲಿ. ಶ್ರೀಗಳ ಜೊತೆಗೆ ನಾವಿದ್ದೇವೆ ಎಂದು ಸಚಿವ ಎಂ. ಬಿ. ಪಾಟೀಲ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಸಚಿವರು ರಂಭಾಪುರ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯರು ಮತ್ತು ಮನಗೂಳಿ ಸಂಸ್ಥಾನ ಹಿರೇಮಠದ ಶ್ರೀ ಅಭಿನವ ಸಂಗನಬಸವ ಶಿವಾಚಾರ್ಯ ಮಹಾಸ್ವಾಮಿಗಳನ್ನು ಗೌರವಿಸಿದರು.

ಈ ಸಂದರ್ಭದಲ್ಲಿ ಜಾಲಹಳ್ಳಿ ಬೃಹನ್ಮಠದ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಸಿಂದಗಿ ಸಾರಂಗಮಠದ ಡಾ. ಪ್ರಭು ಸಾರಂಗದೇವ ಮಹಾಸ್ವಾಮಿಗಳು, ನಾಗಠಾಣ ಉದಯೇಶ್ವರ ಹಿರೇಮಠದ ಶ್ರೀ ಚನ್ನಮಲ್ಲಿಕಾರ್ಜುನ ಮಹಾಸ್ವಾಮಿಗಳು, ಆಲಮೇಲ ಹಿರೇಮಠದ ಶ್ರೀ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು, ಶಾಸಕ ವಿಠ್ಠಲ ಕಟಕದೊಂಡ, ಮಾಜಿ ಸಚಿವ ಸಂಗಣ್ಣ ಕೆ. ಬೆಳ್ಳುಬ್ಬಿ, ಮಾಜಿ ಶಾಸಕ ಮನೋಹರ ಐನಾಪುರ, ಜಿ. ಪಂ. ಮಾಜಿ ಅಧ್ಯಕ್ಷ ವಿ. ಎಸ್. ಪಾಟೀಲ, ಮಾಜಿ ಸದಸ್ಯ ಚಂದ್ರಶೇಖರಗೌಡ ಪಾಟೀಲ, ಮುಖಂಡರಾದ ಸಂಗಮೇಶ ಬಬಲೇಶ್ವರ, ಡಾ. ಮಹಾಂತೇಶ ಬಿರಾದಾರ, ಡಾ. ಗಂಗಾಧರ ಸಂಬಣ್ಣಿ ಮುಂತಾದವರು ಉಪಸ್ಥಿತರಿದ್ದರು.

# ಮಳೆ ನೀರು ಕೊಯ್ಲು



**ಉದಯರಶ್ಮಿ ದಿನಪತ್ರಿಕೆ**

ರಾಜ್ಯದಲ್ಲಿ ಮೆಲ್ಲನೆ ಬರಗಾಲ ತಲೆದೋರಿದೆ. ಮಳೆ ಬರುವ ಯಾವುದೇ ಸೂಚನೆಗಳು ಇಲ್ಲ. ಹೊಲದಲ್ಲಿನ ಪೈರುಗಳು ನೀರಿಲ್ಲದೆ ಒಣಗಿ ಹೋಗುತ್ತಿವೆ. ರಾಜ್ಯದಲ್ಲಿ ಸುಮಾರು 104 ಕೆರೆಗಳು ಬತ್ತಿ ಹೋಗಿವೆ. ಉತ್ತರ ಕರ್ನಾಟಕದಲ್ಲಿ 56 ಮತ್ತು ದಕ್ಷಿಣ ಭಾಗದಲ್ಲಿ 48 ಕೆರೆಗಳು ಬತ್ತಿ ಹೋಗಿವೆ. ಚಳಿಗಾಲದ ದಿನಗಳಿವು, ಬೇಸಿಗೆ ಇನ್ನೂ ಕಾಲಿಟ್ಟಿಲ್ಲ ಆದರೆ ಈಗಾಗಲೇ ನೀರಿಗಾಗಿ ಹಾಹಾಕಾರ ಪ್ರಾರಂಭವಾಗುತ್ತಿದೆ. ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿಗೆ ತತ್ವಾರ ಬಂದೊದಗಿದೆ. ಜನರು ಅನಿವಾರ್ಯವಾಗಿ ತಮ್ಮ ಜಾನುವಾರುಗಳನ್ನು ಕಡಿಮೆ ಬೆಲೆಗೆ ಮಾರುತ್ತಿದ್ದಾರೆ ಇಲ್ಲವೇ ಕಸಾಯಿ ಖಾನೆಗಳಿಗೆ ಅಟ್ಟುತ್ತಿದ್ದಾರೆ. ಖುದ್ದು ಜನರಿಗೇ ನೀರಿಲ್ಲದಿರುವಾಗ ಜಾನುವಾರುಗಳ ಪಾಡು ಕೇಳುವವರಾರು,??

**ವೀಣಾಂತರಂಗ**



–ವೀಣಾ ಎಚ್. ಪಾಟೀಲ್, ಮುಂಡರಗಿ

ಪ್ರತಿ ವರ್ಷದಂತೆ ಸರ್ಕಾರ ನೀರಿಗಾಗಿ ವ್ಯವಸ್ಥೆಗಳನ್ನೇನೋ ಮಾಡುತ್ತಿದೆ. ಜಾನುವಾರುಗಳಿಗೆ ಮೇವು ಮತ್ತು ನೀರಿನ ವ್ಯವಸ್ಥೆಯನ್ನು ಮಾಡಲು ಹೆಣಗಾಡುತ್ತಿದೆ. ಆದರೆ ಇವೆಲ್ಲ ತಾತ್ಕಾಲಿಕ ಪರಿಹಾರೋಪಾಯಗಳು. ಪ್ರತಿ ವರ್ಷ ಬೇಸಿಗೆ ಶುರುವಾಗುವ ಮುನ್ನವೇ ಜನರು ಎದುರಿಸುವ ಪ್ರಮುಖ ಸಮಸ್ಯೆಗಳಲ್ಲಿ ನೀರಿನ



ಸಮಸ್ಯೆಯೇ ದೊಡ್ಡದು.ಹಾಗಾದರೆ ನೀರಿನ ಬವಣೆಯನ್ನು ನೀಗಿಸುವ ಶಾಶ್ವತ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಸಾಧ್ಯವಿಲ್ಲವೇ??

ಖಂಡಿತವಾಗಿಯೂ ಸಾಧ್ಯವಿದೆ. ಮಳೆ ಕೊಯ್ಲು ಎಂಬ ವಿಧಾನದ ಮೂಲಕ ಶೇಕಡ 80ರಷ್ಟು ಪರಿಹಾರಗಳನ್ನು ಕಂಡುಕೊಳ್ಳಬಹುದು.

ಮಳೆ ಕೊಯ್ಲು ವಿಧಾನ ನಮ್ಮ ಪೂರ್ವಜರಿಂದಲೂ ನಡೆದುಕೊಂಡು ಬಂದ ಪದ್ಧತಿ. ಪ್ರತಿಯೊಂದು ಮನೆಯ ಹಿತ್ತಲಲ್ಲಿ ಪ್ರತಿಯೊಂದು ಹೊಲಗಳಲ್ಲಿ ಬಾವಿಗಳು ಇರುತ್ತಿದ್ದವು. ಹಿಂದೆ ನಮ್ಮ ಹೊಲಗಳಲ್ಲಿ ದೊಡ್ಡದಾದ ಬದುವುಗಳನ್ನು ಮಾಡಿ ಸಣ್ಣ ಸಣ್ಣ ಹೊಂಡಗಳನ್ನು ಮಾಡುತ್ತಿದ್ದರು. ಪುಟ್ಟ ಪುಟ್ಟ ಕೆರೆ, ಕಟ್ಟೆಗಳನ್ನು ಕೂಡ ಕಟ್ಟಿಸುತ್ತಿದ್ದರು. ಗ್ರಾಮದ ಹೊರಭಾಗದಲ್ಲಿ ಅತಿ ದೊಡ್ಡ ಕೆರೆಗಳು ಸಮುದಾಯದ ಜನರಿಂದ ನಿರ್ಮಾಣವಾಗುತ್ತಿತ್ತು. ಈ ಕೆರೆಗಳು ನೀರಿನ ಮೂಲಗಳಾಗಿರುತ್ತಿತ್ತು. ಹೀಗೆ ಮಾಡುವುದರಿಂದ ಮಳೆಯ ನೀರು, ಹರಿದು ನದಿಗಳನ್ನು ಸಮುದ್ರಗಳನ್ನು ಸೇರುವುದಕ್ಕಿಂತ ಮುಂಚೆಯೇ ನಮ್ಮ ನಮ್ಮ ಹೊಲಗಳಲ್ಲಿ ಬಸಿದು ಹೋಗಿ ಭೂಮಿಯಲ್ಲಿನ ಅಂತರ್ಜಲ ಮಟ್ಟವನ್ನು ಹೆಚ್ಚಿಸುತ್ತಿದ್ದವು. ಅದೆಷ್ಟೇ ಬಿರು ಬೇಸಿಗೆಯ ದಿನಗಳಿದ್ದರೂ ಬಾವಿಯಲ್ಲಿ ನೀರಿನ ಮಟ್ಟ ಕಡಿಮೆಯಾಗುತ್ತಿರಲಿಲ್ಲ.

ಇನ್ನು ಮಲೆನಾಡಿನಲ್ಲಿ ಕಾಫಿ ತೋಟಗಳಲ್ಲಿ ಟೀ ಎಸ್ಟೇಟ್ಗಳಲ್ಲಿ ಅಲ್ಲಲ್ಲಿ ಟ್ರೆಂಚ್ ಮಾದರಿಯ ಉದ್ದದ ಗುಂಡಿಗಳನ್ನು ತೋಡುತ್ತಿದ್ದರು. ಈ ಗುಂಡಿಗಳು ಗುಡ್ಡದ ಮೇಲಿಂದ ಹ-ರಿದು ಬರುವ ನೀರನ್ನು ಅಲ್ಲಲ್ಲಿಯೇ ಹಿಡಿದಿಟ್ಟುಕೊಂಡು ಆ ಭಾಗದಲ್ಲಿ ನೀರು ಇಂಗಿ ಹೋಗುವಂತೆ ಮಾಡುತ್ತಿದ್ದರು. ಇದ-ರಿಂದಾಗಿ ಸುತ್ತಲಿನ ಎಲ್ಲಾ ಕೆರೆ ಬಾವಿಗಳಲ್ಲಿ ಅಂತರ್ಜಲ ಮಟ್ಟ ಯಾವಾಗಲೂ ಹೆಚ್ಚಿರುತ್ತಿತ್ತು.

ಆದರೆ ಬದಲಾದ ಕಾಲಘಟ್ಟದಲ್ಲಿ ವ್ಯವಸಾಯ ಮಾಡುವುದು ಎಂದರೆ, ಬೀಜ, ಗೊಬ್ಬರ, ಆಳಿನ ಕೂಲಿ ಎಂದು ಖರ್ಚು ಹೆಚ್ಚಾಗಿದ್ದು ಬಾರದ ಮಳೆ, ಕೈ ಕೊಡುವ ಬೆಳೆ, ಮಾಡಿದ ಖರ್ಚಿಗಿಂತ ಕಡಿಮೆ ಆದಾಯ, ಶ್ರಮದ ದುಡಿಮೆಗೆ ತಕ್ಕನಾಗಿ ಸಿಗದ ಫಲದಿಂದ ವ್ಯವಸಾಯ ಮಾಡುವುದು ಅನಾಕರ್ಷಕವಾಗಿದ್ದು,ರೈತಾಪಿ ವರ್ಗದ ಜನರೇ ತಮ್ಮ ಪಾಡು ತಮ್ಮ ಮಕ್ಕಳಿಗೆ ಬೇಡ ಎಂದು ಹೇಳುವ ಪರಿಸ್ಥಿತಿ. ಹಳ್ಳಿಯ ಕೆಲಸಗಳಲ್ಲಿ ಶ್ರಮವೇ ಹೆಚ್ಚು, ದನಗಳನ್ನು ಸಾಕುವುದು ಕೂಡ ತ್ರಾಸದಾಯಕವಾಗಿದೆ. ವ್ಯವಸಾಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ದೊರೆಯದೆ ಹೋಗಿ, ಜನರು ಹಳ್ಳಿಗಳಿಂದ ವಿಮುಖರಾಗಿ ಪಟ್ಟಣದತ್ತ ಮುಖ ಮಾಡಿದ್ದಾರೆ. ಹಾಗಾಗಿ ಮೊದಲಿನಂತೆ ಯಾರೂ ನೀರನ್ನು ಇಂಗಿಸುವ ಈ ಮಳೆ ಕೊಯ್ಲು ವಿಧಾನಗಳನ್ನು ಅನುಸರಿಸುತ್ತಿಲ್ಲ.

ಇತ್ತೀಚೆಗೆ ಸರಕಾರವು ಮಳೆ ಕೊಯ್ಲಿನ ಲಾಭಗಳನ್ನು ಮನಗಂಡು ಕಡ್ಡಾಯವಾಗಿ ಎಲ್ಲರ ಹೊಲಗಳಲ್ಲಿ ಅಂತರ್ಜಲ ಮಟ್ಟವನ್ನು ಸುಧಾರಿಸಲು ಚೆಕ್ ಡ್ಯಾಂ ಗಳ ನಿರ್ಮಾಣ ಮಾಡಲು ಪ್ರೋತ್ಸಾಹ ಧನವನ್ನು ನೀಡುತ್ತಿದೆ. ಪ್ರತಿ ಮನೆಗಳನ್ನು ಕಟ್ಟುವಾಗ ಕಡ್ಡಾಯವಾಗಿ ಮಳೆ ಕೊಯ್ಲು ಮಾಡಬೇಕೆಂಬ ನಿಯಮಾವಳಿಗಳನ್ನು ಮಾಡಿದೆ. ಆದರೆ "ಅಗ್ಗಕ್ಕೆ ಸಿಕ್ಕದ್ದು ಮುಗ್ಗಲು ಜೋಳ" ಎಂಬ ಭಾವ ನಮ್ಮ ಜನರಲ್ಲಿ ಮನೆ ಮಾಡಿದ್ದು ಮಳೆ ಕೊಯ್ಲು ವಿಧಾನ ಇನ್ನೂ ಅಷ್ಟಾಗಿ ಜನಪ್ರಿಯತೆಯನ್ನು ಹೊಂದಿಲ್ಲ.

ಅತ್ಯಂತ ಕಡಿಮೆ ಖರ್ಚಿನಲ್ಲಿ ಪ್ರತಿದಿನದ ನೀರಿನ ಸಮಸ್ಯೆಯನ್ನು ಹೋಗಲಾಡಿಸುವ,


ಮನಕ್ಲೇಶವನ್ನು ಕಳೆಯುವ ಈ ಮಳೆ ಕೊಯ್ಲು ವಿಧಾನದ ಕುರಿತು ಒಂದಷ್ಟು ಮಾಹಿತಿ.

ಮನೆ ಕಟ್ಟಿಸುವ ಸಮಯದಲ್ಲಿಯೇ ಮನೆ ನಿವೇಶನದ ಅಳತೆಗೆ ಸರಿಹೊಂದುವ ಟ್ಯಾಂಕ್ ಒಂದನ್ನು ನಿರ್ಮಾಣ ಮಾಡಿಕೊಳ್ಳಬೇಕು.. ಹೀಗೆ ನಿರ್ಮಿಸಿಕೊಂಡ ಟ್ಯಾಂಕಿಗೆ ಪ್ರತಿ ವರ್ಷವೂ ಮಳೆಗಾಲಕ್ಕೆ ಮುನ್ನ ಸುಣ್ಣ ಬಳಿಯಬೇಕು. ಕೇವಲ ಒಬ್ಬರು ಇಳಿಯುವಂತಹ ಅಲ್ಯೂಮಿನಿಯ ಮುಚ್ಚಳವನ್ನು ಹೊಂದಿರುವ ಈ ಟ್ಯಾಂಕನ್ನು ಪ್ರತಿ ವರ್ಷವೂ ಸ್ವಚ್ಛವಾಗಿ ತೊಳೆದು ಸುಣ್ಣವನ್ನು ಹಚ್ಚಿದ ನಂತರ ಒಣಗಲು ಬಿಟ್ಟು ನಂತರ ಮುಚ್ಚಳವನ್ನು ಹಾಕಿ ಸಂಪೂರ್ಣವಾಗಿ ಸಿಮೆಂಟ್ ನಿಂದ ಮುಚ್ಚಿಬಿಡಬೇಕು.

ಮನೆಯ ತಾರಸಿಯನ್ನು ಕೊಂಚ ಮಾತ್ರವೂ ಕೊಳೆಯಿಲ್ಲದಂತೆ (ಕಪ್ಪು ಬಣ್ಣದ ಪಾಚಿ, ಶಿಲೀಂದ್ರಗಳು) ಸಂಪೂರ್ಣವಾಗಿ ಬ್ರಷ್ ನಿಂದ ಉಜ್ಜಿ ಉಜ್ಜಿ ಸ್ವಚ್ಛಗೊಳಿಸಬೇಕು. ನಂತರ ಇಡೀ ತಾರಸಿಗೆ ಸುಣ್ಣವನ್ನು ಹಚ್ಚಬೇಕು. ತಾರಸಿಯ ಮೇಲೆ ಯಾವುದೇ ರೀತಿಯ ರಾಸಾಯನಿಕ ಗೊಬ್ಬರ, ಔಷಧಿಗಳನ್ನು ಇಡಬಾರದು. ಕಬ್ಬಿಣದ ಸರಳುಗಳು ಇದ್ದರೆ ಅವುಗಳಿಗೆ ಪ್ಲಾಸ್ಟಿಕ್ ಪೈಪ್ಗಳನ್ನು ಹಾಕಿ ಮುಚ್ಚಬೇಕು. ಎಲೆಕ್ಟ್ರಾನಿಕ್ ವಸ್ತುಗಳು, ಸೆಲ್ ಗಳನ್ನು ಕೂಡ ಇಡಬಾರದು. ಮೊದಲ ಮಳೆಗೆ ಮುನ್ನ ಈ ರೀತಿ ಸಂಪೂರ್ಣವಾಗಿ ಸಜ್ಜಾದ ತಾರಸಿ ಮಳೆ ಕೊಯ್ಲಿಗೆ ಸಿದ್ಧವಾಗಿರುತ್ತದೆ. ತಾರಸಿಗೆ ನಿವೇಶನದ ಅಳತೆಗೆ ತಕ್ಕಂತೆ ಮಳೆ ಕೊಯ್ಲು ಮಾಡಲು ಬೇಕಾಗುವ 2-3 ಪೈಪುಗಳನ್ನು ಅಲ್ಲಲ್ಲಿ ಅಳವಡಿಸಿ ಆ ಪೈಪುಗಳನ್ನು ಒಂದೆಡೆ ಸೇರುವಂತೆ ಮಾಡಿಕೊಂಡು ಅಲ್ಲಿ ಎರಡು ವಿಭಾಗಗಳಲ್ಲಿ ಪೈಪುಗಳನ್ನು ಜೋಡಿಸಬೇಕು. ಒಂದು ಪೈಪು ನೇರವಾಗಿ ಕೆಳಗಿನ ಟ್ಯಾಂಕಿಗೆ ಸಂಪರ್ಕ ಹೊಂದಿದ್ದರೆ ಇನ್ನೊಂದು ಪೈಪನ್ನು ಹಾಗೆಯೇ ಹೊರಗೆ ಬಿಟ್ಟಿರಬೇಕು. ಇಲ್ಲಿ ಒಂದು ವಾಲ್ವಿನ ಮೂಲಕ ನೀರು ಒಳ ಹೋಗುವುದನ್ನು ಮತ್ತು ಹೊರಗೆ ಬಿಡುವುದನ್ನು ನಾವು ನಿಯಂತ್ರಿಸಬಹುದು.

ಮೊದಲ ಮಳೆಯಾದಾಗ ಆ ನೀರನ್ನು ಟ್ಯಾಂಕಿಗೆ ನೇರವಾಗಿ ಸೇ-ರಿಸದೆ ಹೊರಗಡೆ ಜೋಡಿಸಿರುವ ಪೈಪ್ ನ ಮೂಲಕ ಹೊರಹಾಕಬೇಕು. ಈ ವಾಲ್ವಿನ ಬಳಿ ಸ್ಟೇನ ಲೆಸ್ ಸ್ಟೀಲ್ ನಿಂದ ಮಾಡಿದ ಫಿಲ್ಟರ್ ಒಂದನ್ನು ಜೋಡಿಸಲಾಗಿದ್ದು ಆ ಫಿಲ್ಟರ್ ತಾರಸಿಯಿಂದ ಹರಿದು ಬರುವ ನೀರಿನಲ್ಲಿನ ಕಶ್ಮಲಗಳನ್ನು ಹಿಡಿದಿಟ್ಟು ಶುದ್ಧವಾದ ನೀರನ್ನು ಮಾತ್ರ ಬಸಿದು ಹೋಗುವಂತೆ, ಸೋಸು ಕೊಳವೆಯನ್ನು ಹೊಂದಿದ್ದು ಶುದ್ಧವಾದ ನೀರು ಮಾತ್ರ ಟ್ಯಾಂಕನ್ನು ಸೇರುವಂತೆ ವ್ಯವಸ್ಥೆ ಹೊಂದಿರುತ್ತದೆ. ಇಲ್ಲಿ ನಾವು ಲಕ್ಷ್ಯ ಕೊಡಬೇಕಾಗಿರುವುದು ಸಂಪೂರ್ಣವಾಗಿ ಗಾಳಿಯಾಡದಂತೆ ಟ್ಯಾಂಕನ್ನು ಸೀಲ್ ಮಾಡಬೇಕು ಎಂಬುದನ್ನು. ಕೇವಲ ನೀರಿನ ಶೇಖರಣೆಯ ಮಟ್ಟವನ್ನು ಅಳೆಯುವ ಉದ್ದನೆಯ ಅಳತೆ ಗೋಲನ್ನು ತೂ-ರಿಸುವಷ್ಟು ಮಾತ್ರದ ರಂಧ್ರ ಈ ಕೆಳಗಿನ ಟ್ಯಾಂಕಿಗೆ ಇರಬೇಕು. ಒಂದೆಡೆ ಪೈಪ್ನ ಮುಖಾಂತರ ಮಳೆಯ ನೀರು ಹರಿದು ಬಂದು ಟ್ಯಾಂಕನ್ನು ಸೇರುವಂತೆ ಇದ್ದರೆ ಇನ್ನೊಂದು ಪೈಪ್ನ ಮೂಲಕ ಪಂಪ್ ಮಾಡಿ ಆ ನೀರನ್ನು ಮನೆಯ ಕುಡಿಯುವ ನೀರಿಗಾಗಿ ಮತ್ತು ಇತರ ಕೆಲಸಗಳಿಗಾಗಿ ಬಳಸಲು ಪಡೆಯುವಂತಹ ವ್ಯವಸ್ಥೆ ಇದ್ದು ಪ್ರತಿದಿನ ನಮ್ಮ ಅವಶ್ಯಕತೆಗೆ ತಕ್ಕಷ್ಟು ನೀರನ್ನು ನಾವು ಹ್ಯಾಂಡ್ ಪಂಪ್ ಗಳ ಮೂಲಕ ತೆಗೆದು ಬಳಸಬಹುದು.

ರಭಸವಾಗಿ ಬರುವ ಮಳೆಯಿಂದ ಟ್ಯಾಂಕುಗಳು ಬೇಗ ತುಂಬುವುದೇನೋ ನಿಜ, ಆದ-ರೆ ಈಗಾಗಲೇ ಮಳೆ ಕೊಯ್ಲು ಮಾಡಿಸಿದವರ ಅಭಿಪ್ರಾಯದ ಪ್ರಕಾರ ಸಣ್ಣನೆಯ ಜಿಟಿ ಜಿಟಿ ಮಳೆಯಲ್ಲಿ ನಿಧಾನವಾಗಿ ಹರಿದು ಬಂದು ಫಿಲ್ಟರ್ ನ ಮೂಲಕ ಸೋಸಲ್ಪಟ್ಟು ತಳ ಸೇರುವ ನೀರು ಹೆಚ್ಚು ಶುದ್ಧತೆಯನ್ನು ಕಾಯ್ದುಕೊಳ್ಳುತ್ತದೆ ಎಂಬುದು. ಸುಮಾರು 30*40 ಅಡಿ ನಿವೇಶನದ ತಾರಸಿ ಹೊಂದಿರುವ ಮನೆಯಲ್ಲಿ 8 ರಿಂದ 10 ಸಾವಿರ ಲೀಟರ್ ನಷ್ಟು ನೀರನ್ನು ಕೇವಲ ಒಂದೆರಡು ಮಳೆಗಳಲ್ಲಿ ನಾವು ಸಂಗ್ರಹಿಸಿಟ್ಟುಕೊಳ್ಳಬಹುದು. ಒಂದು ಮಾಹಿತಿಯ ಪ್ರಕಾರ ಹೀಗೆ ಸಂಗ್ರಹಿಸಿಟ್ಟ ನೀರು ಅತಿ ಹೆಚ್ಚು ಶುದ್ಧವಾಗಿದ್ದು ಇದರ ಪಿಎಚ್ ಮಟ್ಟ ನಾವು ಕೊಂಡು ಕುಡಿಯುವ ಮಿನರಲ್ ವಾಟರ್ ಗಿಂತ ಹೆಚ್ಚು ಎಂಬುದು ಸಾಬೀತಾಗಿದೆ. ಹೀಗೆ ಒಂದು ಬಾರಿ ಎಂಟರಿಂದ ಹತ್ತು ಸಾವಿರ ಲೀಟರ್ ಗಳಷ್ಟು ನೀರು ಸಂಗ್ರಹವಾದರೆ, ಕನಿಷ್ಠ ಕುಡಿಯುವ ನೀರಿನ ಬವಣೆ ಎರಡು ಮೂರು ವರ್ಷಗಳವರೆಗೆ ತಪ್ಪುತ್ತದೆ.




ನಮ್ಮ ದೇಶದಲ್ಲಿ ಅತ್ಯಂತ ಕಡಿಮೆ ಮಳೆಯಾಗುವ ರಾಜಸ್ಥಾನದಂತಹ ಮರುಭೂಮಿ ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದ ಮನೆಗಳಲ್ಲಿ ಸುಮಾರು 15 ರಿಂದ 20 ಸಾವಿರ ಲೀಟರ್ ಸಾಮರ್ಥ್ಯದ ನೀರಿನ ಟ್ಯಾಂಕ್ಗಳನ್ನು ಅಳವಡಿಸಿದ್ದು ಅತಿ ಹೆಚ್ಚಿನ ಮಳೆ ಕೊಯ್ಲನ್ನು ಮಾಡುವ ಮೂಲಕ ಆ ರಾಜ್ಯವು ಕುಡಿಯುವ ನೀರಿನ ಬವಣೆಯನ್ನು ನೀಗಿಸಿಕೊಂಡಿದೆ. ಭಾರತ ದೇಶದಲ್ಲಿ ಅತಿ ಹೆಚ್ಚು ಮಳೆ ಕೊಯ್ಲು ಅಳವಡಿಸಿಕೊಂಡಿರುವ ರಾಜ್ಯವಿದು.

ಬೆಂಗಳೂರಿನಲ್ಲಿ ಸರ್ ಎಂ ವಿಶ್ವೇಶ್ವರಯ್ಯ ಥೀಮ್ ಪಾರ್ಕಲ್ಲಿ ಮಳೆ ನೀರು ಕೊಯ್ಲು ವಿಧಾನವನ್ನು 1972 ರಲ್ಲಿಯೇ ಪ್ರಾರಂಭಿಸಿ ಮೂರು ಹಂತಗಳಲ್ಲಿ ಈ ಕಾಮಗಾರಿ ನಡೆದಿದ್ದು 46,36,000 ಲೀಟರ್ಗಳಷ್ಟು ನೀರನ್ನು ಪ್ರತಿ ವರ್ಷ ಹಿಡಿದಿಡಲಾಗುತ್ತಿದೆ. ಈ ಮಾದರಿಯನ್ನು ಅನುಸರಿಸಿ ಬೆಂಗಳೂರಿನಲ್ಲಿ ಹಲವಾರು ಶಾಲೆಗಳಲ್ಲಿ ಮಳೆ ಕೊಯ್ಲು ವಿಧಾನವನ್ನು ಅಳವಡಿಸಿಕೊಂಡು ತಮ್ಮ ನೀರಿನ ಬವಣೆಯನ್ನು ನೀಗಿಸಿಕೊಂಡಿದ್ದಾರೆ.

ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದವರು 2021 ರಲ್ಲಿ 60 *40 ರ ನಿವೇಶನ ಹೊಂದಿರುವವರು ಕಡ್ಡಾಯವಾಗಿ ಮಳೆ ನೀರು ಕೊಯ್ಲು ಮಾಡಿಸಲೇಬೇಕು ಎಂದು ಗೊತ್ತುವಳಿಯನ್ನು ಹೊರಡಿಸಿದ್ದಾರೆ. ಮಳೆ ಕೊಯ್ಲು ಮಾಡದೆ ಮನೆ ಕಟ್ಟಿರುವವರಿಂದ ಸುಮಾರು ಒಂದುವರೆ ಕೋಟಿಗೂ ಹೆಚ್ಚು ದಂಡ ವಸೂಲಿಯಾಗಿದೆ. ಆದರೂ ಜನರಲ್ಲಿ ಇನ್ನೂ ಅರಿವು ಮೂಡಿಲ್ಲ ಎಂಬುದು ವಿಷಾದದ ಸಂಗತಿ.

ಮಳೆ ಕೊಯ್ಲು ಮೂಲಕ ನೀರನ್ನು ಸಂಗ್ರಹಿಸುವ ಆ ಮೂಲಕ ಪರಿಸರ ಸಂರಕ್ಷಣೆ ಮಾಡುವ ನಿವೇಶನ ಮಾಲೀಕರಿಗೆ ಅವರು ಕಟ್ಟುವ ವಾರ್ಷಿಕ ತೆರಿಗೆಯಲ್ಲಿ ರಿಯಾಯಿತಿ ಕೊಡುವ ಮೂಲಕ ಸರಕಾರ ಅವರನ್ನು ಪ್ರೋತ್ಸಾಹಿಸಬೇಕು ಎಂದು ಪರಿಸರ ತಜ್ಞರು ಸಲಹೆ ನೀಡಿದ್ದಾರೆ.



ಅತ್ಯಂತ ಕಡಿಮೆ ವೆಚ್ಚದಲ್ಲಿ ನಮ್ಮ ನೀರಿನ ಬವಣೆಯನ್ನು ನೀಗಿಸುವ ಈ ಮಳೆ ಕೊಯ್ಲು ವಿಧಾನ ತ್ರಾಸದಾಯಕವಲ್ಲ ಆದ-ರೆ ನಿರಂತರ ನಿರ್ವಹಣೆಯನ್ನು ಬೇಡುತ್ತದೆ. ನೀರಿಗಾಗಿ ಪರದಾಡುವ, ಕಿಲೋಮೀಟರ್ ಗಟ್ಟಲೆ ಹೋಗಿ ನೀರನ್ನು ತರುವ ಕಷ್ಟಕ್ಕಿಂತ ಅತ್ಯಂತ ಕಡಿಮೆ ನಿರ್ವಹಣೆಯನ್ನು ಬೇಡುವ ಮಳೆ ಕೊಯ್ಲು ವಿಧಾನ ನಮ್ಮ ಎಲ್ಲ ರೀತಿಯ ನೀರಿನ ತೊಂದರೆಗಳಿಗೆ ಶಾಶ್ವತ ಪರಿಹಾರ ಒದಗಿಸಬಲ್ಲದು. ಈ ನಿಟ್ಟಿನಲ್ಲಿ ಸರ್ಕಾರ ಮತ್ತು ಪ್ರಜೆಗಳು ಕಾರ್ಯ ಪ್ರವೃತ್ತರಾಗಬೇಕು.

# ಪ್ರಧಾನಿ ನರೇಂದ್ರ ಮೋದಿ 10 ವರ್ಷಗಳ ಆಡಳಿತಲ್ಲಿ..

ಆರ್ಥಿಕ ಮೌಲ್ಯಗಳ ಬೆಳವಣಿಗೆ,
ಧಾರ್ಮಿಕ ಮೌಲ್ಯಗಳ ವೃದ್ಧಿ,
ರಕ್ಷಣಾ ಮೌಲ್ಯಗಳ ಹೆಚ್ಚಳ,
ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಾಧನೆ,
ವಿದೇಶಗಳಲ್ಲಿ ಭಾರತದ ಬ್ರಾಂಡ್ ಮೌಲ್ಯ ಏರಿಕೆ,.
ಸಾಮಾಜಿಕ ಸಾಮರಸ್ಯ ಕುಸಿತ,
ಪ್ರಜಾಪ್ರಭುತ್ವದ ಮೌಲ್ಯಗಳ ನಾಶ,
ಪ್ರಾಕೃತಿಕ ಸಂಪನ್ಮೂಲಗಳ ದುರುಪಯೋಗ,

ರಾಜಕೀಯ ಮತ್ತು ಆಡಳಿತದಲ್ಲಿ ಸೇಡಿನ ಮನೋಭಾವ,

ಮಾನವೀಯ ಮೌಲ್ಯಗಳ ಸಂಪೂರ್ಣ ಅಧೋಗತಿ..

ನರೇಂದ್ರ ಮೋದಿಯವರನ್ನು ಮೆಚ್ಚುವವರು ಮೇಲಿನ ಅಂಶಗಳಿಗೆ ಮತ್ತಷ್ಟು ಸೇರಿಸಿ ಅವರನ್ನು ಅಭಿವೃದ್ಧಿಯ ಹರಿಕಾರ ಎನ್ನುತ್ತಾರೆ,

ಹಾಗೆಯೇ ಅವರನ್ನು ವಿರೋಧಿಸುವವರು ಕೆಳಗಿನ ಅಂಶಗಳಿಗೆ ಮತ್ತಷ್ಟು ಸೇರಿಸಿ ವಿನಾಶದ ಮುನ್ಸೂಚನೆ ಎಂದು ಟೀಕಿಸುತ್ತಾರೆ..

ವಾದ - ಪ್ರತಿವಾದ, ಅಂಕಿ-ಅಂಶಗಳನ್ನು ಬಳಸಿಕೊಂಡು ವಿರೋಧಿಸಲು ಅಥವಾ ಸಮರ್ಥಿಸಲು ಸಾಕಷ್ಟು ವಿಷಯಗಳು ಸಿಗುತ್ತವೆ. ಆದರೆ ಅಂತಃಕರಣ ಪೂರ್ವಕವಾಗಿ,



ಪ್ರಬುದ್ಧ ಮನಸ್ಸು ಸಮಾಜ
ವಿವೇಕಾನಂದ ಎಚ್. ಕೆ.

ಉದಯರಶ್ಮಿ ದಿನಪತ್ರಿಕೆ

ಯಾವುದೇ ಪೂರ್ವಾಗ್ರಹ ಇಲ್ಲದೇ, ಪ್ರಕೃತಿಯ ಮೂಲದಿಂದ, ಭಾರತೀಯ ಮೌಲ್ಯಗಳ ಆಧಾರದ ಮೇಲೆ, ಸಂವಿಧಾನದ ಚೌಕಟ್ಟಿನಲ್ಲಿ, ದೇಶ ಮತ್ತು ಜನರ ಹಿತಾಸಕ್ತಿಗಳನ್ನೇ ಮುಖ್ಯವಾಗಿಸಿ ಚರ್ಚಿಸಿದಾಗ ಸ್ವಲ್ಪಮಟ್ಟಿಗೆ ಸತ್ಯ ಮತ್ತು ವಾಸ್ತವದ ಹತ್ತಿರ ಹೋಗಲು ಸಾಧ್ಯ. ಈಗಿನ ಪರಿಸ್ಥಿತಿಯಲ್ಲಿ ಅದು ಅಷ್ಟು ಸುಲಭವಲ್ಲ. ಪರ ಅಥವಾ ವಿರೋಧಗಳು ಅತಿರೇಕವನ್ನು ತಲುಪಿಯಾಗಿದೆ..

ಆದರೂ ವಿಮರ್ಶಿಸುವ ಪ್ರಯತ್ನಗಳು ನಡೆಯುತ್ತಲೇ ಇರಬೇಕು. ಅದು ಪ್ರಜಾಪ್ರಭುತ್ವದ ಜೀವಂತಿಕೆಯ ಲಕ್ಷಣ..

ವಿಶ್ವದ ಬಹುದೊಡ್ಡ ಪ್ರಜಾಪ್ರಭುತ್ವ ದೇಶದ ಪ್ರಧಾನಿಯಾಗಿ ಮುನ್ನಡೆಸುತ್ತಿರುವ ನರೇಂದ್ರ ದಾಮೋದರ ಮೋದಿಯವರಿಗೆ ಅಭಿನಂದನೆಗಳು ಮತ್ತು ಶುಭಾಶಯಗಳು..

ಅಚ್ಚೇದಿನ್ ಘೋಷಣೆಯೊಂದಿಗೆ ಅಧಿಕಾರಕ್ಕೇರಿದ ಪ್ರಧಾನಿಯವರ ಈ ಹತ್ತು ವರ್ಷಗಳನ್ನು ಹೇಗೆ ನೋಡುವುದು, ಹೇಗೆ ಅರ್ಥೈಸುವುದು..

ಲಕ್ಷ ಲಕ್ಷ ಅಭಿಪ್ರಾಯಗಳು ನಮ್ಮ ಮುಂದಿವೆ. ನರೇಂದ್ರ ಮೋದಿ ಒಬ್ಬ ಸಂತ ಎಂದು ಪ್ರಾರಂಭವಾಗಿ ದೇಶವನ್ನು ಹೀನಾಯ ಪರಿಸ್ಥಿತಿಗೆ ತಂದರು ಎಂಬಲ್ಲಿಗೆ ಬಂದು ನಿಲ್ಲುತ್ತದೆ.

ಅಂತಿಮ ಅಭಿಪ್ರಾಯ ಮತ್ತು ತೀರ್ಮಾನ ನಿಮ್ಮದೇ ಆದರೂ ಯಾವ ಅಂಶಗಳ ಆಧಾರದ ಮೇಲೆ ಇದನ್ನು ನಿರ್ಧರಿಸಬೇಕು ಎಂಬುದನ್ನು ಮಾತ್ರ ಇಲ್ಲಿ ಹೇಳಲಾಗಿದೆ.

ತುಂಬಾ ಸರಳವಾದ ಒಂದು ಲೆಕ್ಕಾಚಾರ..

ಭೂತ - ಭವಿಷ್ಯದ ಆಧಾರದ ಮೇಲೆ ಸಮರ್ಥನೆ ಅಥವಾ ವಿರೋಧ ಬೇಡ. ಕೇವಲ ಅವರ ಹತ್ತು ವರ್ಷಗಳ ಆಡಳಿತದಲ್ಲಿ ಆದ ಅನುಕೂಲ ಮತ್ತು ಅನಾನುಕೂಲಗಳನ್ನು ನಮ್ಮ ನೆಲೆಯಲ್ಲಿ ನಿಂತು ನೋಡೋಣ.

ಈ ಹತ್ತು ವರ್ಷಗಳಲ್ಲಿ ನಮ್ಮ ವೈಯಕ್ತಿಕ ಬದುಕಿನಲ್ಲಿ ಆಗಿರುವ ಬದಲಾವಣೆ, ಹಾಗೆಯೇ ನಮ್ಮ ಕುಟುಂಬ, ನಮ್ಮ ಬೀದಿ, ನಮ್ಮ ಊರು ನಮ್ಮ ಹೋಬಳಿ, ತಾಲ್ಲೂಕು, ಜಿಲ್ಲೆ , ರಾಜ್ಯ ಮತ್ತು ದೇಶ ಇವೆಲ್ಲವೂ ಉತ್ತಮ ಗುಣಮಟ್ಟದಲ್ಲಿ ಅಭಿವೃದ್ಧಿ ಆಗಿದೆಯೇ ಅಥವಾ ಮೊದಲಿಗಿಂತ ಕಠಿಣ ಪರಿಸ್ಥಿತಿ ಎದುರಾಗಿದೆಯೇ?

ತುಂಬಾ ನಿಷ್ಪಕ್ಷಪಾತವಾಗಿ ಯೋಚಿಸಬೇಕು. 360 ಡಿಗ್ರಿ ದೃಷ್ಟಿಕೋನದಿಂದ ಪರಿಶೀಲಿಸಬೇಕು. ಇಲ್ಲಿ ಬೇರೆಯವರಿಗೆ ಉತ್ತರಿಸುವುದಕ್ಕಿಂತ ನಮ್ಮ ಆತ್ಮಸಾಕ್ಷಿಗೆ ಉತ್ತರ ಹೇಳಬೇಕಿದೆ.

ಇಲ್ಲಿ ಮತ್ತೊಂದು ವಿಷಯ ನೆನಪಿಡಿ, ನರೇಂದ್ರ ಮೋದಿ ನಮ್ಮ ದೊಡ್ಡಪ್ಪ ಅಲ್ಲ, ರಾಹುಲ್ ಗಾಂಧಿ ನಮ್ಮ ಚಿಕ್ಕಪ್ಪ ಅಲ್ಲ, ಮಮತಾ ಬ್ಯಾನರ್ಜಿ ಮಾಯಾವತಿಯವರು ನಮ್ಮ ಆಂಟಿಯರಲ್ಲ. ಅವರು ನಮ್ಮಿಂದ ಅಜಗಜಾಂತರ ದೂರದಲ್ಲಿದ್ದಾರೆ. ಅವರಿಂದ ನಮಗೆ ವೈಯಕ್ತಿಕವಾಗಿ ಯಾವುದೇ ಲಾಭವೂ ಇಲ್ಲ ನಷ್ಟವೂ ಇಲ್ಲ.

ಈ ಮಣ್ಣಿನಲ್ಲಿ ಹುಟ್ಟಿದ್ದೇವೆ, ಇಲ್ಲಿನ ಗಾಳಿ ನೀರು ಆಹಾರ ಸೇವಿಸಿದ್ದೇವೆ. ಈ ದೇಶಕ್ಕೆ ಕೃತಜ್ಞರಾಗಿರುವುದು ನಮ್ಮ ಕರ್ತವ್ಯ ಮತ್ತು ಜವಾಬ್ದಾರಿ. ಒಬ್ಬ ವ್ಯಕ್ತಿ ಮುಖ್ಯವಲ್ಲ, ಇಲ್ಲಿನ ಜನರು ಮತ್ತು ದೇಶ ಮುಖ್ಯ.

ಜಾತಿ ಧರ್ಮ ಭಾಷೆ ಎಲ್ಲವೂ ಮನುಷ್ಯನ ಸೃಷ್ಟಿ. ಮನುಷ್ಯನ ಏಳಿಗೆಯೇ ನಿಜವಾದ ಅಭಿವೃದ್ಧಿ. ಆ ದೃಷ್ಟಿಕೋನದಿಂದ ಆಡಳಿತವನ್ನು ನೋಡಬೇಕು.

ಅತ್ಯುತ್ತಮ ಆಡಳಿತ ಎಂಬ ಭಜನೆಯಾಗಲಿ ಅಥವಾ ಕೆಟ್ಟ ಆಡಳಿತ ಎಂಬ ದ್ವೇಷವೂ ಒಳ್ಳೆಯದಲ್ಲ. ಯಾವುದೋ ಪಕ್ಷ ಅಥವಾ ಪಂಥದ ವಕ್ತಾರರಂತೆ ಮಾತನಾಡುವುದು ಸುಲಭ. ಏಕೆಂದರೆ ಅವರನ್ನು ಹೊಗಳಲು ಮತ್ತು ಟೀಕಿಸಲು ಹಲವಾರು ಕಾರಣಗಳು ಸಿಗುತ್ತವೆ. ಅಂಕಿಅಂಶಗಳು ದೊರೆಯುತ್ತದೆ. ಆದರೆ ಅದು ವಾಸ್ತವ ಪರಿಸ್ಥಿತಿಯನ್ನು ಬಿಂಬಿಸುವುದಿಲ್ಲ.

ಕೆಲವು ಆರ್ಥಿಕ ತಜ್ಞರು, ರಾಜಕೀಯ ಚಿಂತಕರು, ಮಾಧ್ಯಮ ಪಂಡಿತರುಗಳು ಹಲವಾರು ವೇದಿಕೆಗಳಲ್ಲಿ ಅವರ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಸಾಮಾಜಿಕ ಜಾಲತಾಣಗಳಲ್ಲಿಯೂ ಅನೇಕರು ಮೋದಿಯವರ ಆಡಳಿತದ ಬಗ್ಗೆ ಲೇಖನಗಳನ್ನು ಬರೆಯುತ್ತಾರೆ. ಆದರೆ ನಾವುಗಳು ಇವುಗಳ ಪ್ರಭಾವಕ್ಕೆ ಒಳಗಾಗಬಾರದು. ಇದನ್ನು ಒಂದು ಮಾಹಿತಿ ಎಂದು ಪರಿಗಣಿಸಿ ಇದರ ಆಧಾರದ ಮೇಲೆ ನಾವೇ ಚಿಂತಿಸಿ ಒಂದು ಅಭಿಪ್ರಾಯ ರೂಪಿಸಿಕೊಳ್ಳಬೇಕು.

ನಮ್ಮಲ್ಲಿ ಸ್ವತಂತ್ರ ಚಿಂತನೆಯ ಕೊರತೆ ಬಹಳ ಇದೆ. ನಾವು ತಜ್ಞರಲ್ಲದೇ ಇರಬಹುದು. ಆದರೆ



ಯೋಚಿಸುವ ಶಕ್ತಿ ಇದೆಯಲ್ಲವೇ, ಎಲ್ಲಾ ಮಾಹಿತಿಗಳು ಬೆರಳ ತುದಿಯಲ್ಲಿ ಸಿಗುತ್ತದೆ. ಅದನ್ನು ಉಪಯೋಗಿಸಿಕೊಳ್ಳಬೇಕು. ನಾನೇ ಆಗಲಿ ಅಥವಾ ಯಾರೇ ಆಗಿರಲಿ ಏನೇ ಬರೆದರು ಅದು ನಮ್ಮ ಅಭಿಪ್ರಾಯ. ದೇಶದ ಪ್ರತಿ ವ್ಯಕ್ತಿಯ ಸ್ವತಂತ್ರ ಚಿಂತನೆ ಬೆಳೆಸಿಕೊಂಡರೆ ಪ್ರಬುದ್ಧ ಸಮಾಜದ ನಿರ್ಮಾಣ ಸಾಧ್ಯ. ಚುನಾವಣಾ ರಾಜಕೀಯದಲ್ಲಿ ತನ್ನ ಮತವನ್ನು ಜವಾಬ್ದಾರಿಯಿಂದ ಚಲಾಯಿಸಲು ಸಾಧ್ಯ.

ಈ ಹಿನ್ನೆಲೆಯಲ್ಲಿ ನರೇಂದ್ರ ಮೋದಿಯವರ ಹತ್ತು ವರ್ಷಗಳ ಆಡಳಿತವನ್ನು ವಿಮರ್ಶಿಸಬೇಕು. ಈ ಅವಧಿಯಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ಮೇಲೇರಿದೆಯೇ ಅಥವಾ ಕುಸಿದಿದೆಯೇ, ಜಾತಿ ಧರ್ಮಗಳ ಸಾಮಾಜಿಕ ಸಾಮರಸ್ಯ ಉತ್ತಮವಾಗಿದೆಯೇ ಅಥವಾ ಹದಗೆಟ್ಟಿದೆಯೇ, ನಿರುದ್ಯೋಗಿಗಳ ಸಂಖ್ಯೆ ಕಡಿಮೆಯಾಗಿದೆಯೇ ಅಥವಾ ಹೆಚ್ಚಾಗಿದೆಯೇ, ಅವರು ಘೋಷಿಸುವ ಯೋಜನೆಗಳು ಕೇವಲ ಪುಸ್ತಕದಲ್ಲಿ ಮಾತ್ರವೇ ಅಥವಾ ವಾಸ್ತವವಾಗಿ ಜಾರಿಯಾಗುತ್ತಿದೆಯೇ, ಪ್ರಜಾಪ್ರಭುತ್ವ ವ್ಯವಸ್ಥೆಯ ಸಂಸ್ಥೆಗಳನ್ನು ಅವರು ಸರಿಯಾಗಿ ನಿಭಾಯಿಸುತ್ತಿದ್ದಾರೆಯೇ ಅಥವಾ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆಯೇ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಆಡಳಿತ ಮಾಡುತ್ತಿದ್ದಾರೆಯೇ ಅಥವಾ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆಯೇ, ಅವರ ಪ್ರತಿ ಮಾತುಗಳಲ್ಲಿ ಇರುವ ಸ್ವಾಭಾವಿಕತೆ ಅಥವಾ ಕೃತಕತೆ ಎಷ್ಟು, ಅದರಲ್ಲಿ ಅಡಗಿರುವ ಪ್ರೀತಿ ವಿಶ್ವಾಸ ಕರುಣೆ ಸ್ವಾರ್ಥ - ನಿಸ್ವಾರ್ಥ ದ್ವೇಷ ಅಸೂಯೆ ಕ್ರೌರ್ಯದ ಪ್ರಮಾಣ ಯಾರ ಬಗ್ಗೆ ಹೇಗಿದೆ, ಭರವಸೆ ಮತ್ತು ಕಾರ್ಯಗತಗೊಳಿಸುವಿಕೆ ಇವುಗಳ ನಡುವಿನ ಅಂತರ ಎಷ್ಟಿದೆ ಮುಂತಾದ ವಿಷಯಗಳನ್ನು ಸೂಕ್ಷ್ಮವಾಗಿ ಮತ್ತು ಕೂಲಂಕಷವಾಗಿ ನಮ್ಮ ಮನದಲ್ಲಿ ಚಿಂತನ ಮಂಥನ ನಡೆಸಬೇಕು.

ಇಲ್ಲಿಯೂ ನಮಗೆ ಲಾಭವಾಗುವ ವಿಷಯಗಳು ಉತ್ತಮ ಮತ್ತು ತೊಂದರೆಯಾಗುವ ವಿಷಯಗಳು ಕೆಟ್ಟದ್ದು ಎಂಬ ಆಧಾರದಲ್ಲಿ ಅಭಿಪ್ರಾಯ ವ್ಯಕ್ತಪಡಿಸದೆ ಒಟ್ಟು ದೇಶದ ಹಿತಾಸಕ್ತಿಯಿಂದ ನೋಡಬೇಕು. ಆಗ ಮಾತ್ರ ಭಾರತದ ಪ್ರಧಾನಿ ನರೇಂದ್ರ ಮೋದಿಯವರ ಹತ್ತು ವರ್ಷಗಳ ಆಡಳಿತದ ಬಗ್ಗೆ ನಿಷ್ಪಕ್ಷಪಾತ ಮತ್ತು ವಾಸ್ತವ ವಿಮರ್ಶೆ ಸಾಧ್ಯ. ಅಷ್ಟು ಸಮಯ ಮತ್ತು ಆಸಕ್ತಿ ಇದ್ದರೆ ಮಾತ್ರ ಇದರ ಬಗ್ಗೆ ಒಂದಷ್ಟು ಖಚಿತವಾಗಿ ಮಾತನಾಡಬಹುದು. ಅವರ ಅವಧಿಯ ಕಿಣಚಿಟಣಿಥಿ ಮತ್ತು ಕಿಣಚಿಟಿಣುಣಿಥಿ ಯ ಪ್ರಮಾಣ ನಿರ್ಧರಿಸಬಹುದು.

ಭಾರತದ ಶ್ರೀಮಂತರ ಸಂಖ್ಯೆ ಎಷ್ಟು ಹೆಚ್ಚಾಗುತ್ತಿದೆ, ಆರ್ಥಿಕ ಗಾತ್ರ ಹೇಗೆ ಬೆಳೆಯುತ್ತಿದೆ, ದೇಶದ ಜಾಗತಿಕ ವರ್ಚಸ್ಸು ಹೇಗೆ ವೃದ್ಧಿಸುತ್ತಿದೆ ಎಂದು ಯೋಚಿಸುವ ಮನಸ್ಸುಗಳು ಹಾಗೆಯೇ ರೈತರು, ಕೂಲಿ ಕಾರ್ಮಿಕರು, ಮಹಿಳೆಯರು, ನಿರ್ಗತಿಕರು, ಸಾಮಾನ್ಯ ವರ್ಗದ ಜನ ಹೇಗೆ ನರಳುತ್ತಿದ್ದಾರೆ ಎಂಬುದನ್ನೂ ಗಣನೆಗೆ ತೆಗೆದುಕೊಳ್ಳಬೇಕು.

ಬುಲೆಟ್ ಟ್ರೈನ್ ಮತ್ತು ಹಸಿವಿನ ಸಾವು ಎರಡೂ ನಿಮ್ಮನ್ನು ಕಾಡಬೇಕು, ಗಾಂಧಿ ಮತ್ತು ಗೋಡ್ಸೆ ಅರ್ಥವಾಗಬೇಕು, ಅಂಬೇಡ್ಕರ್ ಮತ್ತು ಮನುಸ್ಮೃತಿಯ ವಾಸ್ತವ ಪ್ರಜ್ಞೆ ಇರಬೇಕು. ಕಾರ್ಲ್ ಮಾರ್ಕ್ಸ್ ಮತ್ತು ಗೌತಮ್ ಅಧಾನಿ ಸ್ವಲ್ಪ ಮಟ್ಟಿಗೆ ತಿಳಿದಿರಬೇಕು.

ಆಗ ಭಾರತದ ದಿಕ್ಕು ದೆಸೆಯ ಬಗ್ಗೆ ಒಂದು ಅಭಿಪ್ರಾಯ ವ್ಯಕ್ತಪಡಿಸಬಹುದು. ಮೋದಿಯವರ ಸಾಮರ್ಥ್ಯ ಮತ್ತು ಯೋಗ್ಯತೆ ಅಳೆಯಬಹುದು. ಅದರೊಂದಿಗೆ ನಮ್ಮ ಅರ್ಹತೆಗಳನ್ನು, ಮಾನವೀಯತೆಯನ್ನು ಆತ್ಮಾವಲೋಕನ ಮಾಡಿಕೊಳ್ಳಬಹುದು.

ಸ್ವಾವಲಂಬನೆಯ ಭಾರತ ಆಗಬೇಕಾದರೆ ಸ್ವಾಭಿಮಾನಿ ಭಾರತ ಮೊದಲ ಆಧ್ಯತೆಯಾಗಬೇಕು. ಗುಲಾಮಗಿರಿ ಅಥವಾ ಭಜನೆ ಮಂಡಳಿ ಬಿಡಿ. ಸ್ವತಂತ್ರ ಚಿಂತನೆ ಬೆಳೆಸಿಕೊಳ್ಳಿ. ಮನಸ್ಸಿನ ಅಗಾಧವಾದ ಸರೋವರದಲ್ಲಿ ಸ್ವಚ್ಛಂದವಾಗಿ ವಿಹರಿಸಿ. ಸ್ವಾತಂತ್ರ್ಯದ ಸವಿಯನ್ನು ಅನುಭವಿಸಿ.....

ಭಾರತ ಸರ್ಕಾರದ ಹತ್ತು ವರ್ಷಗಳು..

ಅದನ್ನು ನರೇಂದ್ರ ಮೋದಿಯವರ ಆಡಳಿತದ ಅವಧಿ ಎನ್ನುವುದೇ ಹೆಚ್ಚು ಸೂಕ್ತವಾಗಿದೆ. ಬಹುತೇಕ ಈ ಹತ್ತು ವರ್ಷಗಳು ಭಾರತದ ಬಹುತೇಕ ರಾಜಕೀಯ, ಆಡಳಿತ, ಮಾಧ್ಯಮ ಮತ್ತು ಆರ್ಥಿಕ ಚಟುವಟಿಕೆಗಳು ಈ ಏಕ ವ್ಯಕ್ತಿಯ ಸುತ್ತಲೇ ತಿರುಗುತ್ತಿರುವುದು ವಾಸ್ತವ..

ಈ ಹತ್ತು ವರ್ಷಗಳಲ್ಲಿ ನಿಜವಾಗಿಯೂ ಸಾಕಷ್ಟು ಬದಲಾವಣೆ ಆಗಿದೆ. ಅದರಲ್ಲಿ ಕೆಲವು ಉತ್ತಮ, ಕೆಲವು ಆತಂಕಕಾರಿ ಎರಡೂ ಇವೆ. ಕೆಲವು ತಕ್ಷಣದ ಪರಿಣಾಮ ಬೀರಿದರೆ ಮತ್ತೊಂದಿಷ್ಟು ದೀರ್ಘಕಾಲದಲ್ಲಿ ಪರಿಣಾಮ ಬೀರಬಹುದು. ಅವುಗಳಲ್ಲಿ ಕೆಲವು ಮುಖ್ಯವಾದವುಗಳು..

1) ಭ್ರಷ್ಟಾಚಾರದ ವಿರುದ್ಧ ಆಕ್ರೋಶದಿಂದ ಮತದಾನ ಮಾಡಿದ ಭಾರತೀಯ ಮತದಾರರಿಗೆ ಮೋದಿ ಕೊಟ್ಟಿದ್ದೇನು?

-- ಹೌದು, 2014 ರಲ್ಲಿ ಮತದಾರರು ಬಯಸಿದ ಬಹುಮುಖ್ಯ ಬದಲಾವಣೆಗಳಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಬಹುಮುಖ್ಯವಾದುದು. ಅಣ್ಣಾ ಹಜಾರೆಯವರ ಹೋರಾಟದ ಮುಂದುವರಿದ ಭಾಗವಾಗಿ ಅನೇಕ ಹಗರಣಗಳ ಬಗ್ಗೆ ಮಾಧ್ಯಮಗಳು ಮಾಡಿದ ಅತಿರಂಜಿತ ವರದಿಗಳ ಪರಿಣಾಮ ಮತದಾರರು ನರೇಂದ್ರ ಮೋದಿಯವರನ್ನು ಬೆಂಬಲಿಸಿದರು. ಈ ಹತ್ತು ವರ್ಷಗಳಲ್ಲಿ ಭಾರತದಲ್ಲಿ ಭ್ರಷ್ಟಾಚಾರ ಕಡಿಮೆಯಾಗಿದೆಯೇ ಎಂಬ ಪ್ರಶ್ನೆ ನಮಗೆ ಕೇಳಿಕೊಂಡು ಅದಕ್ಕೆ ತುಂಬಾ ವಿಶಾಲವಾದ ಮತ್ತು ಮುಕ್ತವಾದ ಆತ್ಮಸಾಕ್ಷಿಯ ನೆರಳಲ್ಲಿ ಯೋಚಿಸಿದರೆ ಉತ್ತರ ಸಿಗಬಹುದು.

ಭ್ರಷ್ಟಾಚಾರದ ಬಗ್ಗೆ ಇಡೀ ದೇಶದ ಸಾಮಾನ್ಯ ಜನರಲ್ಲಿ ಜಾಗೃತಿ ಮೂಡಿಸಿದ ಹೆಗ್ಗಳಿಕೆ ಮೋದಿಯವರಿಗೆ ಸಲ್ಲಬೇಕು. ಭ್ರಷ್ಟಾಚಾರ ಈ ದೇಶಕ್ಕೊಂದು ಶಾಪ ಎಂದು ನಿರಂತರವಾಗಿ ಮಾತನಾಡುತ್ತಾ ಬಂದರು. ಅನೇಕ ಭ್ರಷ್ಟರ ಮೇಲೆ ದಾಳಿಗಳಾದವು. ಭ್ರಷ್ಟಾಚಾರದ ನಿರ್ಮೂಲನೆಯ ಭಾಗವಾಗಿ ನೋಟು ಅಮಾನ್ಯೀಕರಣ, ಜಿಎಸ್ಟಿ, ಎಲ್ಲಾ ಆರ್ಥಿಕ ವ್ಯವಹಾರಗಳ ಡಿಜಟಲೀಕರಣ, ಬ್ಯಾಂಕ್ ಖಾತೆ ತೆರೆಯಲು ಯೋಜನೆಗಳು, ಯಾವುದೇ ದೊಡ್ಡ ಗಂಭೀರ ಹಗರಣ ನಡೆಯದಂತೆ ಎಚ್ಚರಿಕೆ ಮುಂತಾದ ಕ್ರಮಗಳನ್ನು ಕೈಗೊಂಡರು. ಅದಕ್ಕೆ ಅಭಿನಂದನಾರ್ಹರು.

ಅದೇರೀತಿ ಕೇವಲ ವಿರೋಧ ಪಕ್ಷಗಳನ್ನಷ್ಟೇ ಗುರಿ ಮಾಡಿ ದಾಳಿ ಮಾಡುವುದು, ಹೆದರಿಸಿ ಭ್ರಷ್ಟರನ್ನು ತಮ್ಮ ಪಕ್ಷಕ್ಕೆ ಸೆಳೆಯುವುದು, ಇಡೀ ದೇಶದಲ್ಲಿ 300 ಕ್ಕೂ ಹೆಚ್ಚು ಶಾಸಕರನ್ನು ಬಹಿರಂಗ ಹರಾಜಿನಲ್ಲಿ ಖರೀದಿಸಿದಂತೆ ಮಾಡಿ ಸರ್ಕಾರಗಳನ್ನು ರಚಿಸಿರುವುದು, ತಮ್ಮ ಪಕ್ಷದ ಭ್ರಷ್ಟರನ್ನು ರಕ್ಷಿಸಿರುವುದು, ಹಗರಣಗಳ ಆರೋಪದ ಬಗ್ಗೆ ತನಿಖೆ ಮಾಡಿಸದಿರುವುದು ಹೀಗೆ ಕೆಲವು ವಿಷಯಗಳಲ್ಲಿ ಅಪ್ರಾಮಾಣಿಕ ಮತ್ತು ಪಕ್ಷಪಾತ ಮಾಡಿರುವುದನ್ನು ನಿಷ್ಪಕ್ಷಪಾತ ಮನಸ್ಸಿನ ಜನರು ಮರೆಯಲಾರರು.

2) ರೈಲು ನಿಲ್ದಾಣದಲ್ಲಿ ಟೀ ಮಾರುತ್ತಿದ್ದರು ಎಂದು ಹೇಳಲಾದ ಸಾಮಾನ್ಯ ವ್ಯಕ್ತಿ ಪ್ರಧಾನಿಯಾಗಿ ಆಯ್ಕೆಯಾದ ಅತ್ಯದ್ಭುತ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮೋದಿ ಸಲ್ಲಿಸಿದ ಕೃತಜ್ಞತೆಗಳು ಏನು ?

-- ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಮತ್ತು ವೈವಿಧ್ಯಮಯ ದೇಶದಲ್ಲಿ ಅತ್ಯಂತ ಸಾಧಾರಣ ಕುಟುಂಬದ ಸಾಮಾನ್ಯ ವ್ಯಕ್ತಿ ಚುನಾವಣೆಯ ಮೂಲಕ ನೂರಕ್ಕೂ ಹೆಚ್ಚು ವರ್ಷ ಹಳೆಯದಾದ ಪಕ್ಷವನ್ನು ಎರಡು ಬಾರಿ ಹೀನಾಯವಾಗಿ ಸೋಲಿಸಿ ಅತ್ಯಂತ ಹೆಚ್ಚು ದಾಖಲೆಯ ಬಹುಮತದಿಂದ ಆಯ್ಕೆಗೊಂಡು ಈಗಲೂ ಜನಪ್ರಿಯತೆಯಲ್ಲಿ ಮುಂದುವರಿಯುತ್ತಿರುವುದು ಬಹುದೊಡ್ಡ ಸಾಧನೆ. ಚುನಾವಣಾ ಸಮಯದಲ್ಲಿ ಬಹಳ ಆಕ್ರಮಣಕಾರಿಯಾಗಿ ಪ್ರಚಾರ ಮಾಡುವ ಮೋದಿಯವರು ಚುನಾವಣಾ ಫಲಿತಾಂಶದ ನಂತರ ಸೋತಾಗಲು ವಿರೋಧಿಗಳನ್ನು ಅಭಿನಂದಿಸಿ ತಮ್ಮ ಸ್ಥಾನದ ಜವಾಬ್ದಾರಿ ನಿರ್ವಹಿಸುತ್ತಾರೆ.

ಹಾಗೆಯೇ, ನ್ಯಾಯಾಂಗ ವ್ಯವಸ್ಥೆಯೂ ಸೇರಿ ಕೆಲವು ಸ್ವಾಯತ್ತ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡಿರುವುದು, ವಿರೋಧ ಪಕ್ಷಗಳನ್ನು ತೀವ್ರವಾಗಿ ನಿರ್ಲಕ್ಷಿಸಿರುವುದು, ಸಂಪುಟದ ಇತರ ಸಚಿವರಿಗೆ ಯಾವುದೇ ಮಾನ್ಯತೆ ನೀಡದೆ ಏಕ ವ್ಯಕ್ತಿ ಪ್ರದರ್ಶನ ಮಾಡುವುದು, ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾದ ಕೆಲವು ವಿವಾದಾತ್ಮಕ ಕಾನೂನುಗಳನ್ನು ಜಾರಿಗೊಳಿಸಲು ಪರೋಕ್ಷವಾಗಿ ಪ್ರಯತ್ನಿಸುವುದು ಮುಂತಾದ ತನ್ನನ್ನೇ ಬೆಳೆಸಿದ ಸಂವಿಧಾನದ ವಿರೋಧಿ ನಡವಳಿಕೆಗಳು ಕೂಡ ಅವರ ಅವಧಿಯಲ್ಲಿ ನಡೆಯುತ್ತಿದೆ.

3) ಹತ್ತು ವರ್ಷಗಳ ಹಿಂದಿನವರೆಗಿನ ಮತ್ತು ನಂತರದ ಈಗಿನ ಸಾಮಾಜಿಕ ಸಾಮರಸ್ಯ ಹೇಗಿದೆ ? ಅದಕ್ಕೆ ಮೋದಿಯವರ ಕೊಡುಗೆ ಏನು ?

-- ಭಾರತದ ಸಾಮಾಜಿಕ ವ್ಯವಸ್ಥೆಯ ರಚನೆಯೇ ಬಹಳ ಅಸಮಾನತೆಯಿಂದ ಕೂಡಿದೆ. ಜಾತಿ ವ್ಯವಸ್ಥೆ, ಆರ್ಯ ದ್ರಾವಿಡ ಭಿನ್ನತೆ, ನಗರ ಹಳ್ಳಿಗಳ ವ್ಯತ್ಯಾಸ, ಅಕ್ಷರಸ್ಥ ಅನಕ್ಷರಸ್ಥರ ಕಂದಕ, ಬಡವ ಶ್ರೀಮಂತರ ಬೇಧ, ಭಾಷಾ ವೈವಿಧ್ಯತೆ, ಧಾರ್ಮಿಕ ಶ್ರೇಷ್ಠತೆಯ ವ್ಯಸನ ಎಲ್ಲವೂ ಸೇರಿ ಗೊಂದಲಮಯವಾಗಿದೆ. ಮೋದಿಯವರು " ಏಕ್ ಭಾರತ್ ಶ್ರೇಷ್ಠ್ ಭಾರತ್ " ಪರಿಕಲ್ಪನೆಯನ್ನು ಜಾರಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಸಬ್ ಕಾ ವಿಶ್ವಾಸ್ ಘೋಷಣೆಯನ್ನು ಆಗಾಗ ಉಚ್ಚರಿಸುತ್ತಲೇ ಇರುತ್ತಾರೆ. ಒಂದೇ ಬಾರಿಗೆ ಚುನಾವಣೆ, ಒಂದೇ ರೇಷನ್ ಕಾರ್ಡ್, ಏಕರೂಪ ನಾಗರಿಕ ಸಂಹಿತೆ ಮುಂತಾದ ವಿಷಯಗಳನ್ನು ಜಾರಿ ಮಾಡಿ ಸಾಮರಸ್ಯ ಮೂಡಿಸುವ ಕನಸನ್ನು ಹೊಂದಿದ್ದಾರೆ. ಹಾಗೆ ಚಿಂತಿಸಲು ಅವರು ಸ್ವತಂತ್ರರು.

ಆದರೆ ಈ ಹತ್ತು ವರ್ಷಗಳಲ್ಲಿ ಭಾರತದ ಸಾಮಾಜಿಕ ಸಾಮರಸ್ಯ ಕುಸಿದಿದೆ. ಈ ವಿಷಯದಲ್ಲಿ ಮೋದಿಯವರ ಮಾತು ಮತ್ತು ಕೃತಿಯ ನಡುವೆ ಅಜಗಜಾಂತರ ವ್ಯತ್ಯಾಸವಿದೆ. ಅವರ ತಮ್ಮ ಮಾತೃ ಸಂಸ್ಥೆಯ ಅಣತಿಯಂತೆ ಕಾರ್ಯನಿರ್ವಹಿಸುತ್ತಿರುವುದು ಬಹಿರಂಗ ಸತ್ಯ. ಇವರ ಕಾಲದಲ್ಲಿ ಕೋಮು ಗಲಭೆಗಳು ಕಡಿಮೆಯಾಗಿರುವುದು ನಿಜ. ಆದರೆ ಅಂತರ್ಯದಲ್ಲಿ ಅಸಮಾಧಾನ ಅಡಗಿದೆ. ಸಾಮಾಜಿಕ ಜಾಲತಾಣಗಳ ಪರಿಣಾಮವಾಗಿ ಈ ಸಾಮರಸ್ಯ ಹದಗೆಟ್ಟಿರುವುದು ಹೆಚ್ಚಾಗಿರುವುದಾದರೂ ಅದಕ್ಕೆ ವೇದಿಕೆ ಕಲ್ಪಿಸಿರುವುದು ಮೋದಿಯವರ ಆಡಳಿತ ವೈಖರಿ. ಈ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಹಿನ್ನಡೆಯಾಗಿದೆ.

4) ಮೋದಿಯವರ ಆಡಳಿತದಲ್ಲಿ ಆರ್ಥಿಕ ಪ್ರಗತಿ ಹೇಗಿದೆ ? ಜನರ ಜೀವನಮಟ್ಟದಲ್ಲಿ ಸುಧಾರಣೆ ಆಗಿದೆಯೇ ?

-- ಈ ವಿಷಯದಲ್ಲಿ ಎರಡು ರೀತಿಯ ಬೆಳವಣಿಗೆಯನ್ನು ಗಮನಿಸಬಹುದು. ಒಂದು ಕಡೆ ಭಾರತದ ಒಟ್ಟು ಆರ್ಥಿಕತೆ ವಿಶ್ವಮಟ್ಟದಲ್ಲಿ ಐದನೆಯ ಸ್ಥಾನಕ್ಕೆ ಏರಿದೆ. ಶೀಘ್ರದಲ್ಲೇ ಮೂರನೆಯ ಸ್ಥಾನಕ್ಕೆ ತೆಗೆದುಕೊಂಡು ಹೋಗಲು ಪ್ರಯತ್ನಗಳು ಸಾಗಿವೆ. ಜಿಎಸ್ಟಿ ಸಂಗ್ರಹ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಮೇಕ್ ಇನ್ ಇಂಡಿಯಾ ಯೋಜನೆಯಿಂದ ರಫ್ತು ಹೆಚ್ಚಾಗುತ್ತಿದೆ. ವಿಶ್ವ ಶ್ರೀಮಂತರ ಪಟ್ಟಿಯಲ್ಲಿ ಭಾರತೀಯರ ಸ್ಥಾನಮಾನ ಬೆಳೆಯುತ್ತಿದೆ. ಬುಲೆಟ್ ಟ್ರೈನ್, ವಿಮಾನ ನಿಲ್ದಾಣಗಳು, ದೊಡ್ಡ ದೊಡ್ಡ ಫ್ಲೈ ಓವರ್ ಗಳು, ಸುರಂಗಮಾರ್ಗಗಳು, ಐಟೆಕ್ ಕಟ್ಟಡಗಳು ತಲೆ ಎತ್ತುತ್ತಿವೆ. ಷೇರು ಮಾರುಕಟ್ಟೆ ದಾಖಲೆ ಗರಿಷ್ಠ ಮಟ್ಟ ತಲುಪುತ್ತಿದೆ.

ಇನ್ನೊಂದು ಕಡೆ ಅಷ್ಟೇ ವೇಗದಲ್ಲಿ ಮಧ್ಯಮವರ್ಗದ ಜನರು ಕೆಳ ಮಧ್ಯಮವರ್ಗಕ್ಕೆ ಜಾರುತ್ತಿದ್ದಾರೆ. ಶಿಕ್ಷಣ ಆರೋಗ್ಯ ಸಾರಿಗೆ ದಿನ ನಿತ್ಯದ ಅವಶ್ಯಕ ವಸ್ತುಗಳು ದುಬಾರಿಯಾಗುತ್ತಿದೆ. ಕೊಳ್ಳುಬಾಕ ಸಂಸ್ಕೃತಿಯ ಆಕ್ರಮಣದಿಂದ ಬದುಕು ಅತೃಪ್ತಿಯನ್ನು ಹೆಚ್ಚಿಸುತ್ತಿದೆ. ರಸ್ತೆ ಟೋಲ್ ಗಳೇ ದೊಡ್ಡ ಹೊರೆಯಾಗುತ್ತಿದೆ. ಬಡವ ಶ್ರೀಮಂತರ ಅಂತರ ಹೆಚ್ಚಾಗುತ್ತಿದೆ. ಹಿಂದಿಗಿಂತ ಇಂದು ಅನೇಕ ಕಾರಣಗಳಿಂದ ಬದುಕು ಭಾರವೆನಿಸುತ್ತಿದೆ.




ಕೆಲವರು ಈ ಕಾರ್ಯಯೋಜನೆಗಳು ಭವಿಷ್ಯದಲ್ಲಿ ಉತ್ತಮ ಪರಿಣಾಮ ಬೀರಬಹುದು ಎಂದರೆ ಮತ್ತೆ ಕೆಲವರು ಇದು ಕೆಟ್ಟ ಪರಿಣಾಮ ಬೀರುತ್ತದೆ ಎಂದೂ ಹೇಳುತ್ತಾರೆ. ಆರ್ಥಿಕ ಪರಿಸ್ಥಿತಿಯನ್ನು ಭವಿಷ್ಯವೇ ನಿರ್ಧರಿಸಬೇಕು. ಆದರೆ ಆರ್ಥಿಕ ಕೇಂದ್ರೀಕೃತ ಯೋಜನೆಗಳಿಗೇ ಹೆಚ್ಚಿನ ಮಹತ್ವ ನೀಡುತ್ತಿರುವುದರಿಂದ ಮಾನವೀಯ ಮೌಲ್ಯಗಳು ತೀರಾ ಕೆಳಮಟ್ಟಕ್ಕೆ ಕುಸಿಯುತ್ತಿದೆ ಎಂಬುದು ವಾಸ್ತವ.

5) ಮೋದಿಯವರ ವಿದೇಶಾಂಗ



ನೀತಿಯು ದೇಶದ ಭದ್ರತೆಗೆ ಪೂರಕವೇ ? ಮಾರಕವೇ ?

-- ಗುಜರಾತಿ ಮೂಲದ ಮೋದಿಯವರು ನೀತಿ ನಿಯಮಗಳಿಗಿಂತ ಎಲ್ಲದರಲ್ಲೂ ಲಾಭದ ದೃಷ್ಟಿಕೋನದಿಂದಲೇ ನೋಡುತ್ತಾರೆ. ಆ ದೃಷ್ಟಿಯಿಂದ ಈ ಕ್ಷಣದಲ್ಲಿ ಭಾರತಕ್ಕೆ ಅವರ ಅತ್ಯಂತ ಕ್ರಿಯಾಶೀಲ ವಿದೇಶಿ ಭೇಟಿಗಳಿಂದ ಸ್ವಲ್ಪಮಟ್ಟಿಗೆ ಲಾಭವಾಗುತ್ತಿರುವುದು ನಿಜ. ವ್ಯಾಪಾರ ವಹಿವಾಟಿನ ಜೊತೆಗೆ ಭಾರತದ ಬಗ್ಗೆ ವಿದೇಶಿಯರಲ್ಲಿ ಒಳ್ಳೆಯ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ ಎಂಬುದಾಗಿ ಬಿಂಬಿಸುತ್ತಿದ್ದಾರೆ. ವೈಯಕ್ತಿಕವಾಗಿಯೂ ತಮ್ಮ ಇಮೇಜನ್ನು ವಿಶ್ವ ಮಟ್ಟದಲ್ಲಿ ಹೆಚ್ಚಿಸಿಕೊಂಡಿದ್ದಾರೆ. ರಷ್ಯಾ ಮತ್ತು ಅಮೆರಿಕಾದೊಂದಿಗೆ ಬ್ಯಾಲೆನ್ಸ್ ಮಾಡುತ್ತಿದ್ದಾರೆ.

ಆದರೆ ಮೋದಿಯವರ ನಂತರದ ಆಡಳಿತಗಾರರಿಗೆ ಈ ರೀತಿಯ ವೈಯುಕ್ತಿಕ ಮಟ್ಟದ ವಿದೇಶಾಂಗ ನೀತಿ ಅನುಸರಿಸುವುದು ಕಷ್ಟ. ಅಲಿಪ್ತ ನೀತಿಯ ನಮ್ಮ ಅತ್ಯುತ್ತಮ ವಿದೇಶಾಂಗ ನೀತಿ ಎಡಬಿಡಂಗಿಯಾಗುವ ಸಾಧ್ಯತೆಯೂ ಇದೆ. ಶಾಂತಿಯ ಕಾಲದಲ್ಲಿ ಅದರ ಪರಿಣಾಮ ಗೊತ್ತಾಗುವುದಿಲ್ಲ. ಆದರೆ ಯುದ್ಧ, ವ್ಯಾಪಾರದ ಸಂಘರ್ಷ ಮುಂತಾದ ಸಂದರ್ಭದಲ್ಲಿ ವಿದೇಶಾಂಗ ನೀತಿ ಅಗ್ನಿ ಪರೀಕ್ಷೆಗೆ ಒಳಪಡುತ್ತದೆ. ವಿದೇಶಾಂಗ ನೀತಿಯನ್ನು ವೈಯಕ್ತಿಕ ಇಚ್ಛೆಯ ಮಟ್ಟಕ್ಕೆ ಇಳಿಸಿದ ಅಪಕೀರ್ತಿ ಮೋದಿಯವರಿಗೆ ಸಲ್ಲುತ್ತದೆ.

6) ಭಾರತದ ಭದ್ರತಾ ದೃಷ್ಟಿಯಿಂದ ಮೋದಿಯವರ ಸಾಧನೆ ಏನು ?

-- ಸ್ವಲ್ಪ ಮಟ್ಟಿಗೆ ಆಕ್ರಮಣಕಾರಿ ಮತ್ತು ಯುದ್ದೋತ್ಸಾಹಿ ಮೋದಿಯವರು ದೇಶದ ರಕ್ಷಣೆಗಾಗಿ ಹೆಚ್ಚಿನ ಮಹತ್ವ ನೀಡಿದ್ದಾರೆ ಎಂಬುದು ನಿರ್ವಿವಾದ. ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಖರೀದಿಯನ್ನು ಮಾಡುತ್ತಿದ್ದಾರೆ. ವಿದೇಶೀ ಶಕ್ತಿಗಳ ಜೊತೆ ಪ್ರಬಲ ರಕ್ಷಣಾ ಒಪ್ಪಂದ ಮಾಡಿಕೊಂಡಿದ್ದಾರೆ.

ಆತ್ಮ ನಿರ್ಭರ ಭಾರತ ಎಂಬ ಪರಿಕಲ್ಪನೆಯ ಅಡಿಯಲ್ಲಿ ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಶ್ರಮಿಸುತ್ತಿದ್ದಾರೆ. ಸೈನ್ಯದ ಆಧುನಿಕತೆಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ.

ಈ ವಿಷಯದಲ್ಲಿ ಅವರ ಸಾಧನೆ ತೃಪ್ತಿಕರ ಅಥವಾ ಹೆಮ್ಮೆ ಪಡುವಂತೆ ಇದೆ. ಭಾರತದ ರಕ್ಷಣಾ ವ್ಯವಸ್ಥೆ ಬಲಗೊಂಡಿದೆ. ಆದರೂ ಚೀನಾದ ಆಕ್ರಮಣ ತಡೆಯಲು ಸಾಧ್ಯವಾಗಿಲ್ಲ. ಚೀನಾ ಈಗಲೂ ಒಳ ಪ್ರವೇಶಿಸಿದೆ ಎಂದು ವರದಿಗಳು ಹೇಳುತ್ತವೆ. ಭಾರತದ ನಿಜವಾದ ಅಹಿಂಸಾ ಶಕ್ತಿಗೆ ವಿರುದ್ಧವಾಗಿ ಭಾರತವನ್ನು ಶಸ್ತ್ರಾಸ್ತ್ರ ಶಕ್ತಿಯಾಗಿ ಬೆಳೆಸುವ ಪ್ರಯತ್ನ ಎಷ್ಟು ಸರಿ ಎಂಬ ಪ್ರಶ್ನೆ ಕೆಲವರನ್ನು ಕಾಡಬಹುದು.

7) ಮೋದಿ ಸರಳ ವ್ಯಕ್ತಿಯೇ ಅಥವಾ ಆಡಂಬರದ ಪ್ರದರ್ಶನ ಬಯಸುವ ಶೋಕಿ ಸ್ವಭಾವದವರೇ?

-- ಕೌಟುಂಬಿಕ ಜವಾಬ್ದಾರಿ ಹೊಂದಿರದ, ಇಳಿ ವಯಸ್ಸಿನಲ್ಲಿಯೂ ಅತ್ಯುತ್ತಮ ಆರೋಗ್ಯ ಕಾಪಾಡಿಕೊಂಡಿರುವ, ಸದಾ ಕ್ರಿಯಾಶೀಲ ವ್ಯಕ್ತಿತ್ವ ಹೊಂದಿರುವ ಮೋದಿಯವರು ಸರಳತೆಯ ಮುಖವಾಡ ಹೊಂದಿರುವ ಆಡಂಬರ ಪ್ರದರ್ಶನದ ವ್ಯಕ್ತಿ. ಮೇಲ್ನೋಟಕ್ಕೆ ಸರಳ ಎಂದು ಹೇಳಿದರು ಅತ್ಯುತ್ತಮ ಗುಣಮಟ್ಟದ ವಸ್ತ್ರ ವಿನ್ಯಾಸ, ಆಹಾರ ಕ್ರಮ, ದೇಹ ಸೌಂದರ್ಯದ ಮುತುವರ್ಜಿ, ಅತಿಹೆಚ್ಚು ಪ್ರಚಾರಪ್ರಿಯ, ಸದಾ ಮುಂಚೂಣಿಯಲ್ಲಿ ಇರಬೇಕು ಎಂದು ಹಾತೊರೆಯುವ ಗುಣ ಸ್ವಭಾವ, ಸರ್ವಾಧಿಕಾರಿ ಮನೋಭಾವವನ್ನು ಗುರುತಿಸಬಹುದು.

ಹೀಗೆ ಒಟ್ಟಾರೆಯಾಗಿ ನರೇಂದ್ರ ಮೋದಿಯವರು ಮೇಲ್ನೋಟಕ್ಕೆ ದೇಶವನ್ನು ಸುಭದ್ರ ಮತ್ತು ಪ್ರಗತಿಯ ಹಾದಿಯಲ್ಲಿ ನಡೆಸುತ್ತಿದ್ದಾರೆ ಎನಿಸಿದರು ಆಂತರ್ಯದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬಹುದೊಡ್ಡ ಅಪಾಯ ಮತ್ತು ಸವಾಲನ್ನು ಒಡ್ಡುತ್ತಿದ್ದಾರೆ. ಏಕ ವ್ಯಕ್ತಿ ಪ್ರದರ್ಶನ ನೀಡುತ್ತಿದ್ದಾರೆ. ನಡೆ ನುಡಿಯ ನಡುವೆ ಸಾಕಷ್ಟು ಅಂತರದಲ್ಲಿ ಕೆಲಸ ಮಾಡುತ್ತಾರೆ.

ಏನೇ ಆಗಲಿ, ಗೋವಾ, ಮಣಿಪುರ, ಮಧ್ಯಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಮುಂತಾದ ರಾಜ್ಯಗಳ ರಾಜಕೀಯ ನಡೆಗಳು ಮತ್ತು ಜಾರಿ ನಿರ್ದೇಶನಾಲಯದ ದುರುಪಯೋಗ ಮೋದಿ ಆಡಳಿತದ ಕಪ್ಪು ಚುಕ್ಕೆಗಳಾಗಿ ಇತಿಹಾಸದಲ್ಲಿ ದಾಖಲಾಗುತ್ತದೆ. ಶ್ರೀಮಂತರ ಪರ ಬಡವರ ವಿರೋಧಿ ಆಪಾದನೆಯಿಂದ ಮುಕ್ತವಾಗುವುದು ಕಷ್ಟ. ಹಾಗೆಯೇ ಕೆಲವರ ಪಾಲಿಗೆ ಆಧುನಿಕ ಭಾರತದ ಶಿಲ್ಪಿ, ಸನಾತನ ಧರ್ಮದ ಪುನರುಜ್ಜೀವನ ಮಾಡಿದ ಮಹಾನ್ ಹಿಂದೂ ನಾಯಕ, ಇತಿಹಾಸ ಬದಲಿಸಿದ ಹರಿಕಾರ ಎಂದೂ ದಾಖಲಾಗಬಹುದು.

ಒಟ್ಟಿನಲ್ಲಿ ನಮ್ಮ ದೇಶದ ಪ್ರಧಾನಿಯವರ ಹತ್ತು ವರ್ಷಗಳ ಆಡಳಿತದ ಅವಧಿಯನ್ನು ಸಂವಿಧಾನಾತ್ಮಕ ಅಭಿವ್ಯಕ್ತಿ ಸ್ವಾತಂತ್ರ್ಯದ ಅಡಿಯಲ್ಲಿ ವಿಮರ್ಶಿಸುವ ಒಂದು ಸರಳ ವೈಯಕ್ತಿಕ ಪ್ರಯತ್ನವಿದು. ಇದು ಪರಿಪೂರ್ಣವೇನು ಅಲ್ಲ. ವಿಮರ್ಶೆಯ ವ್ಯಾಪ್ತಿ ತುಂಬಾ ವಿಶಾಲವಾದುದು. ಇದು ಸಾಮಾನ್ಯ ವ್ಯಕ್ತಿಯಾದ ನನ್ನ ಅಭಿಪ್ರಾಯ ಮಾತ್ರ. ಇದಕ್ಕಿಂತ ಭಿನ್ನ ಅಭಿಪ್ರಾಯ ನಿಮ್ಮದಾಗಿದ್ದರೆ ಅದನ್ನೂ ಸ್ವಾಗತಿಸುತ್ತಾ..

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR